ಇವತ್ತು ನನ್ನ ಮೂಲಗಳು ತಿಳಿಸುತ್ತವೆ ಏನೆಂದರೆ ಸೆಂಟ್ರಲ್ ಪ್ಲಾನ್ ಸ್ಕೀಮ್‌ನಿಂದ ಏನು ಹಣ ಬಂದಿದೆ, that money also is used for salaries. You have not utilised that money for the programmes for which the Central Government has given. ಇವತ್ತು ವರ್ಲ್ಡ್‌ಬ್ಯಾಂಕ್‌ನವರು ಏಕೆ ಬಂದ್ ಮಾಡಿದರು? ಮೊನ್ನೆ ಮಂತ್ರಿಗಳು ಮತ್ತೆ ಶುರುಮಾಡಿದ್ದಾರೆ ಎಂದು ಹೇಳಿದರು. ಏಕೆಂದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಿಂದ ಏನು ಹಣ ಬಂತು you have not fulfilled i.e., non-fulfilment. ಹಾಗಾಗಿ ಇವತ್ತು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. let us go to chapter 5.8 of Draft Annual Plan 1994ನಲ್ಲಿ ಏನು ಹೇಳುತ್ತಾರೆ? 'The shortfall in progress could be attributed to the following reasons : ಇರಿಗೇಷನ್‌ನಲ್ಲಿ ಎಷ್ಟೊಂದು ಬಳಕೆ ಮಾಡಬೇಕಿತ್ತು , ಏನು ಟಾರ್ಗೆಟ್ ಇತ್ತು ಅಷ್ಟರಮಟ್ಟಿಗೆ ಏಕೆ ಮಾಡುವುದಕ್ಕೆ ಆಗಿಲ್ಲವೆಂದು ಹೇಳುತ್ತಿದ್ದೀರಿ. ಏಕೆ ಫುಲ್‌ಫಿಲ್ ಮಾಡುವುದಕ್ಕೆ ಆಗಿಲ್ಲವೆಂದರೆ - ನಿಮ್ಮ Draft Annual Plan 1994 Volume I - shortage of LOC. ಇವತ್ತು ಎಲ್ಲೆಲ್ಲಿ ಪ್ಲಾನಿಂಗ್ ಕಮಿಷನ್‌ನವರು ನಿಮಗೆ ದಾರಿ ಮಾಡಿಕೊಂಡು ಬಂದಿದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಇರಬೇಕು. ಒಂದು ಸಾವಿರ ಕೋಟಿ ಹೆಚ್ಚು ಸಂಗ್ರಹ ಮಾಡಿದ್ದೇವೆ, ಎಂದು ಈಗ ಹೇಳಿದರು. ಆದರೆ ಈ ಪರಿಸ್ಥಿತಿ ಏಕೆ ಬಂತು. ಏಕೆ ನೀರಾವರಿ ಆಗಲಿಲ್ಲ . Your own document says ಎಲ್.ಓ.ಸಿ.

ಕೊಟ್ಟಿಲ್ಲ ಎಂದು. ಇದಕ್ಕೆ ತಾವು ವಿವರಣೆ ಕೊಡಬೇಕು. ನಾವು ರಿಸೋರ್ಸಸ್ ಮೊಬಲೈಸ್ ಮಾಡಿದ್ದೇವೆಂದು ಹೇಳಿದರೆ, You have spent the resources on unproductive things, which you have no right to do. ನೀವು ಒಂದು ಕಡೆ ರಿಸೋರ್ಸ್ ಒಂದು ಕಡೆ ಮೊಬಲೈಸ್ ಮಾಡಿರಬಹುದು. But , I said there was no financial discipline. National priorities, ಸ್ಟೇಟ್ ಪ್ಲಾನ್ ಏನು ಹೇಳುತ್ತದೆ. ಇದಕ್ಕೆ ನೀವು ಗಮನ ಕೊಟ್ಟಿಲ್ಲ. You went for only cheap slogans. ಹಾಗಾಗಿ ಇವತ್ತು ಹಣದ ದುರುಪಯೋಗವಾಗಿ, ಸರಿಯಾಗಿ ಫೈನಾನ್ಷಿಯಲ್ ಡಿಸಿಪ್ಲೀನ್ ಇಲ್ಲದೇ ಈ ಎಲ್.ಓ.ಸಿ. ರೆಸ್ಟ್ರಿಕ್ಷನ್ಸ್ ಬಂದಿವೆ, ಆದ್ದರಿಂದ ನೀವು ಇಷ್ಟು ಹಣ ಕಲೆಕ್ಟ್ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. You have no right, because your own document says. ಈ ಒಂದು ಪರಿಸ್ಥಿತಿಯಿಂದ ಎಲ್ಲಾ ಅಭಿವೃದ್ಧಿ ಕೆಲಸ, ಅದು ನೀರಾವರಿ ಇರಬಹುದು, ಪವರ್ ಪ್ರಾಜೆಕ್ಟ್ ಇರಬಹುದು, ನಿಮ್ಮ ಟೈಟ್ ಫೈನಾನ್ಷಿಯಲ್ ಪೊಸಿಷನ್‌ನಿಂದ ಸಫರ್ ಆಗುತ್ತಾ ಇವೆ. In turn, ರಾಜ್ಯದ ಅಭಿವೃದ್ಧಿ ಮೇಲೆ ಪರಿಣಾಮವಾಗಿದೆ. ರಾಜ್ಯದ ಫ್ಯೂಚರ್ ಜನರೇಷನ್ ಮೇಲೆ ಪರಿಣಾಮವಾಗಿದೆ. ಹಾಗಾಗಿ ಎಲ್ಲಿಯತನಕ ನೀವು ಈ ಹಣಕಾಸಿನ ಮಟ್ಟವನ್ನು ಇಂಪ್ರೂವ್ ಮಾಡಿಕೊಳ್ಳುವುದಿಲ್ಲವೋ, ಆ ತನಕ ನೀವು ಈ ಬಜೆಟ್‌ನಲ್ಲಿ ನೀರಾವರಿಗೆ ಕಾವೇರಿಗೆ 250 ಕೋಟಿ, ಮತ್ತೆ ಬಾಕಿ ಯೋಜನೆಗಳಿಗೆ 600 ಕೋಟಿ, 50 ಕೋಟಿ ಕಾವೇರಿಗೆ ಹೆಚ್ಚು ಕೊಡುತ್ತೇವೆಂದು ಹೇಳಿದ್ದು, ಒಂಭತ್ತೂವರೆ ಕೋಟಿ ಪವರ್ ಸೆಕ್ಟಾರ್‌ಗೆ ಕೊಡುತ್ತೇನೆಂದು ಹೇಳಿರುವುದು ಏನೇನೂ ಉಪಯೋಗವಾಗುವುದಿಲ್ಲ. ನೀವು ಮುಂಚೆ ಫೈನಾನ್ಷಿಯಲ್ ಡಿಸಿಪ್ಲೀನ್ ತನ್ನಿ. ಪ್ರಾಡೆಕ್ಟೀವ್ ಸೆಕ್ಟಾರ್ ಮೇಲೆ ಖರ್ಚು ಮಾಡಿ, ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಕಡಿಮೆ ಮಾಡಿ, ಆಗ ಇದು ಸಾಧ್ಯತೆ ಇದೆ. ಒಂದು ಕಡೆ ಇಂಥ pronouncement ಮಾಡುವುದು, ಮತ್ತೊಂದು ಕಡೆ You go on creating posts. What was the necessity to create 20 Deputy Commissioners (Excise) Posts? Was the DC incapable of monitoring this? Were they unfit - the Deputy Commissioners? Dual role ಮಾಡಿ, ಕರಪ್ಷನ್ ಹೆಚ್ಚು ಮಾಡಿಸಿದಿರಿ. ನೀವು ಏಕೆ ಬೋರ್ಡ್, ಕಾರ್ಪೋರೇಷನ್‌ಗಳನ್ನು ಅಬಾಲಿಷ್ ಮಾಡುತ್ತಾ ಇಲ್ಲ. ಕೆಲವು ಡಿಫಂಕ್ಟ್ ಇವೆ, ಕೆಲವು white elephants ಇದೆ . Abolish them. One thing, I am happy the Chief Minister who is the Finance Minister. ಸಾರ್ವಜನಿಕ ಸಾಲದ ಬಗ್ಗೆ ಪ್ರಾಮಾಣಿಕವಾಗಿ ಹೇಳಿದ್ದಾರೆ. And he has given a picture. 1993-94 ಪ್ರಕಾರ, ಸಾರ್ವಜನಿಕ ಸಾಲ Public debt is Rs. 9,000 crores. ಇಷ್ಟೊಂದು ಭಾರ ನಮ್ಮ ಮೇಲಿದೆ. ಈ ರಾಜ್ಯದ ಜನತೆಯ ಮೇಲೆ, 9 ಸಾವಿರ ಕೋಟಿಯ ಭಾರ ಇದೆ. ಇವತ್ತು ಪರ್ ಕ್ಯಾಪಿಟಾ ಎಷ್ಟು ಬರಬಹುದು ಲೆಕ್ಕಹಾಕಿ. ನೀವೇ ಮಾಡಿದ್ದೀರಿ ಎಂದು ಹೇಳುವುದಿಲ್ಲ. ನಿಮ್ಮ ಮೇಲೆ ಜವಾಬ್ದಾರಿ ಹಾಕುವುದಿಲ್ಲ. I never said. I am happy that he has come out with the true picture. 9 ಸಾವಿರ ಕೋಟಿ ಭಾರ ಇದೆ. ಈ ಸಾರ್ವಜನಿಕ ಸಾಲ ಬಹಳ ಸೀರಿಯಸ್ ಇದೆ. ಸ್ಟೇಟ್ ಫೈನಾನ್ಸ್ ಮಿನಿಸ್ಟರ್ ತನ್ನ ಸ್ಪೀಚ್‌ನಲ್ಲಿ ಹೇಳಿದರೆ ಆಗುವುದಿಲ್ಲ.. ' Public speech - serious threat '. I have seen it. Every rupee which comes I think, for loan repayment 10.25% is going. ಪ್ರತಿಯೊಂದು ರೂಪಾಯಿಯಲ್ಲಿ ಕೇಂದ್ರಸರ್ಕಾರದಲ್ಲಿ, to service the debt, they are spending 25%. But here the State Government is

spending 10.25% of every rupee for loan repayment. ಈ ಸಾರ್ವಜನಿಕ ಸಾಲವನ್ನು ಯಾವ ಪ್ರಕಾರ ಕಡಿಮೆ ಮಾಡಬೇಕು, ಮತ್ತು ಸಾರ್ವಜನಿಕ ಸಾಲ ತೆಗೆದುಕೊಂಡ ನಂತರ, you have to spend it for productive purposes, for constructive purposes and for creative purposes ಇದರಿಂದ ರಾಜ್ಯಕ್ಕೆ ಲಾಭ ಆಗಬೇಕಾಗಿದೆ, ಇದರಿಂದ ರಾಜ್ಯದ ಆದಾಯ ಹೆಚ್ಚಾಗಬೇಕಾಗಿದೆ. ಎಲ್ಲೆಲ್ಲಿ ನೀವು ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರಿ, ಆ ಇನ್‌ವೆಸ್ಟ್‌ಮೆಂಟ್‌ನಿಂದ ನಿಮಗೆ ಸರಿಯಾದ ಫಲಿತಾಂಶ ಬರಬೇಕಾಗಿದೆ. ಇದು ಮಾಡದೇ, if the finance Minister says in the budget that it is a serious threat, it will not solve the problem. I want to know from the Finance Minister, the Hon'ble Chief Minister to utilise the public debt properly, to reduce it and to use it for infrastructure development and thereby mobilise resourses, what is the programme of the Government. What is your strategy for that? ಇದೇ ಪ್ರಕಾರ ನಮ್ಮ ಪಬ್ಲಿಕ್ ರೇಟ್ ಹೆಚ್ಚಾಗುತ್ತಾ ಇದ್ದರೆ, it will be a no-confidence against all of us.

ಈ ನಾಡಿನ ಜನರು ನಮಗೆ ನಂಬಿ ಏನು ಕಳುಹಿಸಿದ್ದಾರೆ ಆ ಜನಗಳಿಗೆ ಉತ್ತರ ಕೊಡಬೇಕಾಗುತ್ತದೆ. 5 ವರ್ಷಗಳು ಆದ ಮೇಲೆ. ನಾವೇನು ಸಾಲ ಮಾಡಿದ್ದೇವೆ ನಿಮ್ಮ ಮೇಲೆ ಏನು ಹೊರೆ ಮಾಡಿದ್ದೇವೆ ಅದು ಇಂಥ ಪರ್‌ಪಸ್ ಮಾಡಿದ್ದೆವು ಅದರಿಂದ ನಮ್ಮ ಮುಂದಿನ ಜನರೇಶನ್‌ಗೆ ಒಳ್ಳೆಯದಾಗುತ್ತದೆ ನಿಮಗೆ ಯಾವುದೂ ಭಯ ಇಲ್ಲ ಎಂದು ಹೇಳುವ ಶಕ್ತಿ ನಿಮ್ಮ ಕಡೆ ಇರಬೇಕಾಗುತ್ತದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ . ಇವತ್ತು ಸೀರಿಯಸ್ ಆಗಿ ಪ್ರಾಮಿಸಸ್ ಕೊಡುತ್ತಾ ಬಂದಿದ್ದೀರಿ. ಇದು ರಾಜಶೇಖರ ಮೂರ್ತಿಯವರ ಕಾಲದಿಂದ ಪ್ರಾಮಿಸಸ್ ಕೊಡಲಿಕ್ಕೆ ಶುರು ಆಯಿತು. ನಾನು ತೋರಿಸುತ್ತೇನೆ.

I can prove from four budget speeches. You have not been able to fulfil 10% of your promises. Even 10% of the promises have not been fulfilled. I will come to it one by one. Very interesting. 1992-93ರಲ್ಲಿ ಇರಿಗೇಶನ್ ಬಗ್ಗೆ ನೀವು ಏನು ಹೇಳಿದ್ದೀರಿ. ಪುಟ 42 ಪ್ಯಾರಾ 46ರಲ್ಲಿ

"Even though the State had a total irrigation potentital of 55 lakh hectares, so far we have been able to provide irrigation to 24.4 lakh hectres only."

Let me come to the budget speech of 1991-92. You have *said in* 1991-92 :

"Irrigation potential in the State is about 55 lakh hectares till

the end of March, 90, a total potential of 29.78 Lakh hectares have been created ."

ಮಾರ್ಚಿ 90ರಲ್ಲಿ ತಾವು ಹೇಳಿದ್ದೀರಿ ಬಜೆಟ್‌ಸ್ಪೀಚ್‌ನಲ್ಲಿ 29.78 ಲಕ್ಷ ಹೆಕ್ಟೇರ್ ಇರಿಗೇಶನ್ ಪೊಟೆನ್‌ಷಿಯಲ್ ಇದೆ ಅಂತ. ಅದೇ 1992ರಲ್ಲಿ ಏನು ಹೇಳುತ್ತೀರಿ 24.4 ಇದೆ ಎಂದು ಹೇಳುತ್ತಿದ್ದೀರಿ ಇದರ ಅರ್ಥ ಏನಾಯಿತು. 2 ವರ್ಷದ ನಂತರ 5 ಲಕ್ಷ ಹೆಕ್ಟೇರ್ ಕಡಿಮೆ ಆಯಿತು ಇರಿಗೇಶನ್ ಪೊಟೆನ್‌ಷಿಯಲ್. ಅಂದರೆ ನೀವು ಎಷ್ಟು ನೆಗಲಿಜೆಂಟ್ ಇದ್ದೀರಿ ಇರಿಗೇಷನ್‌ಗೆ ಪ್ರಾತಿನಿಧ್ಯ ಕೊಡುವಂತಹ ಸರ್ಕಾರ ಇದನ್ನು ತನ್ನ ಬಜೆಟ್ ಸ್ಪೀಚ್‌ನಲ್ಲಿ ಹೇಳುತ್ತದೆ. 1990ನೇ ಇಸವಿಯಲ್ಲಿ 29.78 ಇರಿಗೇಷನ್ ಆಗುತ್ತದೆಂದು ಹೇಳಿದ್ದಾರೆ. Then in your next speech of 1992-93, you have said irrigation is provided for 24.4 lakhs hectares ಎಂದು ಹೇಳುತ್ತೀರಿ. ಎಷ್ಟೊಂದು ಬೇಜವಾಬ್ದಾರಿಯಿಂದ ತಾವು ನಡೆದುಕೊಳ್ಳುತ್ತೀದ್ದೀರಿ? ಈ ಫಿಗರ್ಸ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಕ್ಸ್‌ಪ್ಲೈನ್ ಮಾಡಬೇಕಾಗುತ್ತದೆ. What is the reason for this? ಎತಕ್ಕೆ ಹೀಗೆ ಆಯಿತು ಎಂದು ಹೇಳಬೇಕಾಗುತ್ತದೆ. So, does it mean that the irrigation potential has come down? ಅದೇ ಪ್ರಕಾರ ಬೇರೆ ಪ್ರಾಮಿಸಸ್ ತಾವು ಕೊಡುತ್ತಾ ಬಂದಿದ್ದೀರಿ. 1990-91ರ ಬಜೆಟ್ ಸ್ಪೀಚ್‌ನಲ್ಲಿ " The Government of India have been requested for early clearence of the gas turbine project" ಎಂದು ಹೇಳಿದ್ದೀರಿ. what has happened to gas turbine project? ರಾಜಶೇಖರಮೂರ್ತಿಯವರು ಹೇಳಿದರು.

"Gas grid : Hon'ble Members are aware of the serious and critical power situation in the the state. While it would be our endeavour to provide a maximum resource to the power sector, the shortage is likely to continue. In this context, the State Government strongly urges the Central Government to set up a Gas Grid for the southern States." what has happened to this? ತಾವು ಏನು ಹೇಳುತ್ತಿದ್ದೀರಿ ಅದನ್ನು ಮಾಡಿಲ್ಲ. ವೀರೇಂದ್ರ ಪಾಟೀಲರು ಹೇಳಿದ್ದನ್ನು ಬಂಗಾರಪ್ಪನವರು ಮರೆತರು ಬಂಗಾರಪ್ಪ ಹೇಳಿದ್ದನ್ನು ತಾವು ಮರೆತ್ತಿದ್ದೀರಿ. What has happened to this promise? In the power front, what efforts have been done to start this Gas Grid? Only this budget pronouncement is an empty pronouncement. Nothing has happened. ಬಜೆಟ್ ಸ್ಪೀಚ್ 92-93ರಲ್ಲಿ ಏನು ಹೇಳಿದ್ದೀರಿ? Para -12ರಲ್ಲಿ,

"A team led by the Managing Director, Karnataka Power Corporation visited China during 1991 for two weeks mainly for training in the technology of construction and operation of small hydro electric projects."

ಇವತ್ತು ನಾನು ಕೇಳುತ್ತೇನೆ, ಎಷ್ಟು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟನ್ನು ತಾವು ಮಾಡಿದ್ದೀರಿ? ಈ

ಬಜೆಟ್ ಸ್ಪೀಚ್‌ನಲ್ಲಿ 17 ಮಿನಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ಒಂದು ಪ್ರಾಜೆಕ್ಟೂ ಇಲ್ಲ. ಪವರ್ ಜನರೇಷನ್‌ಗೆ ಹಣ ಕೊಟ್ಟಿದ್ದೇವೆಂದು ಹೇಳುತ್ತಾ 4 ವರ್ಷದಿಂದ ಬಂದಿದ್ದೀರಿ. 4 ವರ್ಷದಿಂದ ಎಲೆಕ್ಟ್ರಿಕ್ ಜನರೇಷನ್ ಬಗ್ಗೆ ನಿಮಗೆ ಚಿಂತೆ ಇಲ್ಲ. ಮ್ಯಾನೇಜಿಂಗ್ ಡೈರೆಕ್ಟರ್ ಚೈನಾಗೆ ಹೋಗಿ ಬಂದರು. ಯಾವ ಕೆಲಸವೂ ಇಲ್ಲ. ಯಾವ ಮಿನಿ ಹೈಡ್ರೋ ಪ್ರಾಜೆಕ್ಟ್ ಬಂದಿಲ್ಲ. Does the Government again wants to send the Managing Director of KPC for a China trip? ಇದರಿಂದಾಗಿ ಇವತ್ತು ತಾವು ಪ್ರತಿಯೊಂದೂ ಹಂತದಲ್ಲಿ ವಿಫಲವಾಗಿದ್ದೀರಿ. ಮತ್ತೊಂದು ಬಹಳ ಶಾಕಿಂಗ್ ಏನು ಹೇಳಿದ್ದೀರೆಂದರೆ 92-93ನೇ ಬಜೆಟ್‌ನಲ್ಲಿ, you have given credit to the KEB for managing power supply effectively. KEB is not in a position even to give you 3% interest on the capital and it is a defaulter to KPC. What good work has it done? ಕೆ.ಇ.ಬಿ.ಯವರು 3 ಪರ್‌ಸೆಂಟ್ ಸರ್ಕಾರಕ್ಕೆ / interest on capital investment **ಕೊಡಬೇಕಾಗಿತ್ತು. ಆದರೆ ಕೊಡುವ ಶಕ್ತಿ ಕೆ.ಇ.ಬಿ.ಗೆ ಇಲ್ಲ.** ನಿಮ್ಮ ಪ್ರಾಮಿಸಸ್ ಎಷ್ಟು ಎಂಟಿ ಇವೆ? ಆ ಪ್ರಾಮಿಸಸ್‌ನಲ್ಲಿ ಏನೇನೂ ಇಲ್ಲ. Only empty promises or false slogans. **ಇಷ್ಟು ಇವೆಯೇ ವಿನಃ ಇದರಿಂದ ರಾಜ್ಯದ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಕಳೆದ 4 ವರ್ಷಗಳಲ್ಲಿ** according to Statistics our capacity is about 3000 Megawatts. **ನಮ್ಮದು 300 ಮೆಗಾವಾಟ್ ಇರಬಹುದು . ನಮ್ಮ ನೇಬರಿಂಗ್ ಸ್ಟೇಟ್ ಆಂಧ್ರ , ತಮಿಳುನಾಡು ಗಳಲ್ಲಿ 4,400 ಮೆಗಾವಾಟ್ ಇದೆ. ನಿಮ್ಮ ಕಾಂಟ್ರಿಬ್ಯೂಷನ್ ಏನಿದೆ?** In 1989-90 you have invested Rs.267.26 and generated 115.4 MW of power; in 1990-91 you have made an investment of Rs.330.64 crores and you have generated 339.4 M.W; in 1991-92 you have invested Rs. 476.04 crores and you have generated 29 M.W. In 1992.93 you have invested 687.73 crores. We don't know how much power would be generated. For the last three years power generated is not even 450 M.W. ಪವರ್ ಸೆಕ್ಟಾರ್ ಪ್ರಯಾರಿಟಿ ಬಗ್ಗೆ ತಾವು ಮಾತನಾಡುತ್ತೀರಿ. What have you done? For reducing transimission loss what is your programme? ನಿಮ್ಮದು ಏನು ಪ್ರೋಗ್ರಾಂ ಇದೆ ಕೇವಲ ಪ್ರನೌನ್ಸ್‌ಮೆಂಟ್ ಮಾಡಿ ಬಜೆಟ್‌ನಲ್ಲಿ 600 ಕೋಟಿ ಕೊಟ್ಟಿದ್ದೇವೆಂದರೆ ಏನು ಪ್ರಯೋಜನ? Your past experience shows that you are unfit to manage. you have lost all your credibility and you cannot manage this. ಯಾವ ಪವರ್ ಸೆಕ್ಟಾರ್‌ಗೆ ನೀವು ಪ್ರಾಧಾನ್ಯತೆ ಕೊಟ್ಟಿರಿ? ಆ ಪವರ್ ಸೆಕ್ಟಾರ್‌ನಿಂದ ಪವರ್ ಜನರೇಟ್ ಆಗುತ್ತಿಲ್ಲ. ಹಾಗಾಗಿ ಇವತ್ತು ಇದರ ಬಗ್ಗೆ ಸ್ಪಷ್ಟೀಕರಣ ನಮಗೆ ಬೇಕಾಗಿದೆ. ಅದಕ್ಕೆ ಕಾರಣ ಏನು? ಏಕೆ ಪವರ್ ಜನರೇಟ್ ಮಾಡಲಿಕ್ಕೆ ಆಗಲಿಲ್ಲ? ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಫಾರಿನ್‌ಗೆ ಹೋಗಿ ಬಂದ್ರು. MOUs were signed. What happened to these MOUs ? Are there people? Are they still alive or they fled away or are they still willing to honour that commitment ? We want to know. ಮೆಮೊರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್ ಏನು ಮಾಡಿದ್ದೀರಿ, ಅದರ ಬಗ್ಗೆ ನಮಗೆ ಗೊತ್ತಾಗಬೇಕಾಗಿದೆ.

Government of India has announced a tax holiday for investments on power projects. ಯಾವ ರಾಜ್ಯದಲ್ಲಿ ಪವರ್ ಸೆಕ್ಟಾರ್‌ದಲ್ಲಿ ಅವರು ಇನ್‌ವೆಸ್ಟ್ ಮಾಡುವುದಕ್ಕೆ ಮುಂದೆ ಬರುತ್ತಾರೆ, they have given tax holidays. The Hon'ble Chief Minister should have thought on those lines. ಏಕೆಂದರೆ ಪವರ್ ಎಷ್ಟು ಡೆವಲಪ್ ಮಾಡುತ್ತೀರಿ, ಅದರ ಮೂಲಕ ನಾವು ಇರಿಗೇಶನ್‌ಗೆ ರೈತರಿಗೆ ಅನುಕೂಲ ಮಾಡಿಕೊಡಲು ಸಾಧ್ಯವಿದೆ. ಇಂಡಸ್ಟ್ರೀಗಳಿಗೆ ಅನುಕೂಲ ಮಾಡಿಕೊಡಲು ಸಾಧ್ಯವಿದೆ. Power is very important infrastructure. Today we are suffering because of power. So many industries are going away from Karnataka though there is a healthy climate. I would suggest the Finance Minister to consider exempting the power units in Karnataka if they come under the purview of tax. ಇನ್‌ಪ್ಲೇಶನ್ ಬಗ್ಗೆ ಕೂಡ ತಾವು ಹೇಳಿದ್ದೀರಿ. In your budget speech you have said ; "The economic reforms introduced by the Central Government have, however, brought about a gradual upturn in the economy. Inflation levels have come down to about 7% from 14% in 1991-92 and the growth rate has picked up.........." ಇದನ್ನು ಯಾರನ್ನು ಫೂಲ್ ಮಾಡುವುದಕ್ಕೆ ಹೇಳಿದ್ದೀರಿ? What is the impact of your reduction in inflation on the common man? Has the common man benefited? ಇದರಿಂದ ಸಾಮಾನ್ಯ ಜನರಿಗೆ ಏನಾದರೂ ಲಾಭವಾಗುತ್ತದೆಯೇ? ಇವೊತ್ತಿನ ದಿವಸ ಸಕ್ಕರೆ ಪಾಮ್‌ಆಯಿಲ್, ಗೋಧಿ, ಅಕ್ಕಿ, ಹೀಗೆ ಎಲ್ಲಾ ಬೆಲೆಗಳನ್ನು ಹೆಚ್ಚು ಮಾಡಿದ್ದೀರಿ. What is this inflation? For whom it was reduced? Has the common man benefited? The answer is 'No.' ಸಾಮಾನ್ಯ ಜನರಿಗೆ ಏನೂ ಅನುಕೂಲವಾಗಿಲ್ಲ. Having brought down inflation from 14% to 7% is Mr. Manmohan Singh has a feather in his cap to tell the World Bank and IMF? Have you improved the financial status of a common man in Karnataka? ಬಡಜನರ ಆರ್ಥಿಕಾಭಿವೃದ್ಧಿಯ ಬಗ್ಗೆ ಏನಾದರೂ ಪ್ರಯತ್ನವನ್ನು ರಾಜ್ಯದಲ್ಲಿ ಮಾಡಿದ್ದೀರಾ? The instability of your leadership has led to a situation of total mismanagement of the finances in the state. Because of the instability this mismanagement has taken place. ತಾವುಗಳು ಹೊಸ ಟ್ಯಾಕ್ಸ್‌ಗಳನ್ನು ಹಾಕಿದ್ದೀರಿ. ಅಲ್ಯೂಮಿನಿಯಂನ ಮೇಲೆ ತಾವುಗಳು ಟ್ಯಾಕ್ಸ್ ಹಾಕಿದ್ದೀರಿ. ಹಾಗೆಯೇ ಆಟಾ, ಸೋಜಿ, ಮೈದಾ, ಮುಂತಾಗಿ ಸಾಮಾನ್ಯ ಜನರು ಉಪಯೋಗಿಸುವ ಹಲವಾರು ವಸ್ತುಗಳ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಇದಕ್ಕೆ ಕಾರಣ ಏನು? ಅಲ್ಯೂಮಿನಿಯಂ ಪಾತ್ರೆಗಳನ್ನು ಉಪಯೋಗ ಮಾಡುವವರು ಯಾರು? ಅದನ್ನು ಬಡಜನರು ಉಪಯೋಗಿಸುತ್ತಾರೆ. ಅದರ ಮೇಲೆ ಟ್ಯಾಕ್ಸ್ ಹಾಕುವ ಅವಶ್ಯಕತೆ ನಿಮಗೇನಿತ್ತು? ಆ ಬಗ್ಗೆ ಅವರು ರೀಕನ್‌ಸಿಡರ್ ಮಾಡಬೇಕೆಂದು ಒತ್ತಾಯ ಪಡಿಸುತ್ತೇನೆ, ಅದೇ ಪ್ರಕಾರವಾಗಿ, ಆಟಾ ,ಸೋಜಿ, ಮೈದಾ, ಇಂಥ ವಸ್ತುಗಳನ್ನು ಬಡವರು ಹೆಚ್ಚು ಉಪಯೋಗ ಮಾಡುವ ವಸ್ತುಗಳು . ಇಂಡಸ್ಟ್ರೀಗಳು ಕೂಡ ಕಷ್ಟದಲ್ಲಿವೆ. ಆಂಧ್ರ, ಮಹರಾಷ್ಟ್ರ, ರಾಜ್ಯಗಳಲ್ಲಿ ಈ ವಸ್ತುಗಳಿಗೆ ರಿಯಾಯಿತಿಯೂ ಇದೆ. ನಮ್ಮ ರಾಜ್ಯಗಳಲ್ಲಿ ಈ ರೀತಿಯಲ್ಲಿ ಬಡಜನರು

ಉಪಯೋಗಿಸುವ ವಸ್ತುಗಳ ಮೇಲೆ ಟ್ಯಾಕ್ಸ್ ಹಾಕಲು ಕಾರಣವೇನು? ಇದು ಸಾಮಾನ್ಯ ಜನರ ಮೇಲೆ ಮಾಡಿದ ಗಧಾಪ್ರಹಾರ. ಇವೊತ್ತು ಅಕ್ಕಿ ಬಳಕೆಯು ಜಾಸ್ತಿಯಾಗಿರುವುದನ್ನು ಕಡಿಮೆ ಮಾಡಬೇಕಾದರೆ ಗೋಧಿ ಬಳಕೆಯನ್ನು ಹೆಚ್ಚು ಮಾಡಿಸಬೇಕು. ಗೋಧಿ ಬಳಕೆಯು ಹೆಚ್ಚಿಗೆ ಆಗಬೇಕಾದರೆ ಅದರ ಮೇಲೆ ನೀವು ಟ್ಯಾಕ್ಸ್ ಹಾಕಬಾರದು. ಅದಕ್ಕಾಗಿ ಈ ವಿಚಾರದಲ್ಲಿ ರೀಕನ್‌ಸಿಡರ್ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. I ask the Finance Minister to reconsider his decision and withdraw this tax and continue the exemption.

ಇರಿಗೇಷನ್ ಪೊಟೆನ್ಸಿಯಲ್ ಬಗ್ಗೆ ಬಹಳಷ್ಟು ಹೇಳಿದ್ದೀರಿ. ಇರಿಗೇಶನ್ ವಿಚಾರದಲ್ಲಿ ಏನೇನು ಮಾಡುತ್ತೇವೆ ಎಂಬುದನ್ನು ಹೇಳಿದ್ದೀರಿ. ಈ ವರ್ಷದ ಬಜೆಟ್ ಪ್ರಪೋಸಲ್‌ನಲ್ಲಿ 1.25 ಲಕ್ಷ ಹೆಕ್ಟೇರ್ ನಾವು ಇರಿಗೇಶನ್ ಪೊಟೆನ್‌ಶಿಯಲ್ ಕ್ರಿಯೆಟ್ ಮಾಡುತ್ತೇವೆಂದು ಹೇಳಿದ್ದೀರಿ. ಅಧಿಕಾರದಲ್ಲಿ ನೀವು ಬಂದು ಮೂರೂವರೆ ವರ್ಷವಾಯಿತು. ಕಳೆದ ಮೂರೂವರೆ ವರ್ಷದಲ್ಲಿ ತಾವು ಮಾಡಿದ್ದೇನು? ನಾವು ಹಣ ಜಾಸ್ತಿ ಮೊಬಲೈಸ್ ಮಾಡಿದ್ದೀವೆ ಎಂದು ಹೇಳುತ್ತಿದ್ದಿರಿ. ನಾನು ಫಿಗರ್ಸ್ ಕೊಡುತ್ತೇನೆ ಕೇಳಿ. 1989-90 ನೀವು ಇನ್‌ವೆಸ್ಟ್ ಮಾಡಿದ್ದುದು 239.26 ಕೋಟಿ . Irrigation potential created was 22,000 hectares. 1990-91 ನೀವು ಹಣ ಖರ್ಚು ಮಾಡಿದ್ದುದು 276.21 ಕೋಟಿ, irrigation potential created 30,000 hectares. 91-92ನೇ ಇಸವಿಯಲ್ಲಿ ನೀವು ಹಣ ಇನ್‌ವೆಸ್ಟ್ ಮಾಡಿದ್ದುದು 345.15 ಕೋಟಿ, ನೀವು ಇರಿಗೇಷನ್ ಪೋಟೆನ್‌ಶಿಯಲ್ ಕ್ರಿಯೆಟ್ ಮಾಡಿದ್ದುದು 48 ಸಾವಿರ ಹೆಕ್ಟೇರ್ ಮತ್ತು 92-93ರಲ್ಲಿ ತಾವು ಇನ್‌ವೆಸ್ಟ್ ಮಾಡಿದ್ದುದು 526 ಕೋಟಿ, ಇರಿಗೇಶನ್ ಪೊಟೆನ್‌ಶಿಯಲ್ ಕ್ರಿಯೇಟ್ ಆಗಿದ್ದು 66 ಸಾವಿರ ಹೆಕ್ಟೇರ್ ಹಾಗಾದರೆ ಕಳೆದ ನಾಲ್ಕು ವರ್ಷಗಳಲ್ಲಿ ತಾವು ಕ್ರಿಯೇಟ್ ಮಾಡಿದ್ದು 1.50 ಲಕ್ಷ ಹೆಕ್ಟೇರ್. ಇದರಲ್ಲಿ ಮಿಡಿಯಂ, ಮೇಜರ್, ಮೈನರ್ ನೀರಾವರಿಗಳೂ ಸೇರಿವೆ. Are you going to achieve 1,27,000 hectares this year? ಹೊಸ ಮುಖ್ಯಮಂತ್ರಿಗಳು ಬಂದ ನಂತರ ಹೊಸ ತಂತ್ರಗಳು ಜಾದುಗಳು ನಿಮ್ಮ ಕೈಲಿದೆಯೇ? ಯಾವ ಕೆಲಸವನ್ನೂ ನಿಮ್ಮ ಕೈಲಿ 4 ವರ್ಷ ಮಾಡುವುದಕ್ಕೆ ಆಗಲಿಲ್ಲ, ಈ ಕೆಲಸ ಒಂದು ವರ್ಷದಲ್ಲಿ ಮಾಡುವುದಕ್ಕೆ ಹೊರಟಿರಿ, ಇದು ಸಾಧ್ಯವಿದೆಯೇ? ಇದು ಸಾಧ್ಯವಾಗಬೇಕಾದರೆ ನಿಮಗೆ ಕಮಿಟ್‌ಮೆಂಟ್ ಇರಬೇಕಾಗುತ್ತದೆ. ಆ ಪ್ರಕಾರ ಡ್ರೈವ್ ನಮ್ಮಲ್ಲಿರಬೇಕಾಗುತ್ತದೆ. ಅಪ್ಪರ್ ಕೃಷ್ಣಾಗೆ ಅಧಿಕಾರಿಗಳು ಹೋಗಲಿಕ್ಕೆ ತಯಾರಿಲ್ಲ. you have to be very strict. ಕಾವೇರಿ ಬಗ್ಗೆ ಸರಿಯಾದ ನಿಲುವು ನಿಮ್ಮ ಕಡೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಇದೇ ಪ್ರಕಾರ ನೀವು ವರ್ಕ್ ಮಾಡಿದರೆ ರಾಜ್ಯದ ರೈತರು ನಿಮಗೆ ಸರಿಯಾದ ಪಾಠ ಕಲಿಸುತ್ತಾರೆ. ಅದರ ಬಗ್ಗೆ ಸಂದೇಹವಿಲ್ಲ, ನಾವೂ ಸಹ ನಿಮ್ಮ ವಿರುದ್ಧ ಹೋರಾಟ ಶುರು ಮಾಡಬೇಕಾಗುತ್ತದೆ. ಹಾಗಾಗಿ ಯಾವ ಕೆಲಸ ನಿಮಗೆ 4 ವರ್ಷದಲ್ಲಿ ಮಾಡಲಿಕ್ಕೆ ಸಾಧ್ಯವಾಗದಿರುವಾಗ, ಏತಕ್ಕೆ ಇಂಥ ಅಂಬಿಶಿಯಸ್ ಟಾರ್ಗೆಟ್ ಇಡುತ್ತೀರಿ. ಆದ್ದರಿಂದ ಕೇವಲ ಪೊಳ್ಳು ಘೋಷಣೆಗಳು ಇಟ್ಟುಕೊಂಡು ತಾವು ಏನೂ ಅಚೀವ್ ಮಾಡುತ್ತಾ ಇಲ್ಲ. ಇವತ್ತು 2000 ಅಡಿ ಒಳಗೆ ನೀವು ನೀರಿನ ಬಳಕೆ ಮಾಡಬೇಕಾಗಿದೆ. ಕಾವೇರಿ ನೀರನ್ನು ಅಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ತಾವು ಪ್ರಾಧಾನ್ಯತೆ ಕೊಟ್ಟಿರಿ, ನೀರಾವರಿ ಖಾತೆಗೆ ಈ ಸಲ 850 ಕೋಟಿ. I welcome it. ಆದರೆ ನಾನು ಹೇಳುತ್ತಿದ್ದೇನೆ, ನಿಮಗೆ ನಾನು ಅಭಿನಂದನೆ ಮಾಡಬೇಕಾದರೆ ನೀವು ಇರಿಗೇಷನ್ ಪೊಟೆನ್‌ಶಿಯಲ್ ಕ್ರಿಯೆಟ್ ಮಾಡಬೇಕಾಗುತ್ತದೆ, ನಾಡಿನ ರೈತರಿಗೆ ನಿಮ್ಮಿಂದ ಅನುಕೂಲ ಆಗಬೇಕಾದರೆ. ಮೋಸ ಮಾಡಬೇಡಿ, ಸುಳ್ಳು ಸ್ಲೋಗನ್ ಕೊಡಬೇಡಿ. ಹ್ಯಾಪಿ ರೋಜಿ ಸ್ಲೋಗನ್ಸ್ ಬಜೆಟ್ ಭಾಷಣದಲ್ಲಿ ನೀವು ಕೊಟ್ಟರೆ ರೈತರ ಸಮಸ್ಯೆ ಬಗೆಹರಿಸುವುದಕ್ಕಾಗುವುದಿಲ್ಲ. ರಾಜ್ಯದ

ರೈತರು ಬಹಳ ಕಷ್ಟದಲ್ಲಿದ್ದಾರೆ . ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಪ್ರಿಯಾರಿಟಿ ಕೊಡಿ. ನಮ್ಮ ಮೈನರ್ ಇರಿಗೇಷನ್ ಮಿನಿಸ್ಟರ್ ನನಗೆ ಹೇಳಿದರು, ನಾಯಕರೇ, ನಿಮ್ಮದೊಂದು ಪಟ್ಟಿ ಕಳಿಸಿರಿ ಎಂದು, ನಾನು ಪಟ್ಟಿ ಕಳಿಸಿದೆ. ಪರಿಸ್ಥಿತಿ ಏನಾಯಿತು ಅವರಿಗೂ ಗೊತ್ತು ಕಳೆದ ವರ್ಷದ ಸ್ಪಿಲ್ ವರ್ಕ್‌ಗೂ ನನ್ನ ಕ್ಷೇತ್ರದಲ್ಲಿ ಹಣ ಕೊಡುವುದಕ್ಕಾಗುವುದಿಲ್ಲ. ಅವರ ತಪ್ಪಲ್ಲ ಅದು, I don't blame him. He is a very sincere person. I have regard for him. ಏನು ಹಣ ಕೊಟ್ಟಿರಿ ಮೈನರ್ ಇರಿಗೇಷನ್‌ಗೆ ? ಮುಖ್ಯಮಂತ್ರಿಗಳಿಗೆ ಹೇಳಿದೆ, ನಮ್ಮ ಫೈನಾನ್ಸ್ ಕಮಿಷನರ್ ಬಹಳ ಒಳ್ಳೆಯವರು, ಅವರ ಬಗ್ಗೆ ನಮಗೆ ಅಭಿಮಾನ ಗೌರವ ಇದೆ. ಅವರಿಗೂ ಹೇಳಿದೆ. ಮೈನರ್ ಇರಿಗೇಷನ್ ಪೋಟೆನ್‌ಶಿಯಲ್ ಟ್ಯಾಪ್ ಮಾಡಿ, ಇಮಿಡಿಯೇಟ್ ಅದರಿಂದ ರಿಸಲ್ಟ್ ಬರುತ್ತದೆ. But nothing has happened. ಲಿಫ್ಟ್ ಇರಿಗೇಷನ್ ಕಾರ್ಪೋರೇಷನನ್ನು ಅಬಾಲಿಶ್ ಮಾಡಿದಿರಿ, ಒಪ್ಪಿಕೊಳ್ಳುತ್ತೇನೆ. ಏನಾಯಿತು, ಕಳೆದ 5 - 6 ವರ್ಷದಲ್ಲಿ ನಿಮಗೆ ಒಂದು ಲಿಪ್ಟ್ ಇರಿಗೇಷನ್ ಸ್ಕೀಮು ಜಾರಿಗೆ ತರುವುದಕ್ಕಾಗಲಿಲ್ಲ. Not even a single lift irrigation scheme has been implemented. ಎಲ್ಲಾ ವೈಟ್ ಎಲಿಫೆಂಟ್ಸ್. ಹಾಗಾಗಿ ನಾನೂ ಇನ್ನೂ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ, ತಾವು ಹಣ ಕೊಟ್ಟಿರಲ್ಲ. ಸಂತೋಷ. ಇನ್ನೂ ಸ್ವಲ್ಪ ಹಣ ಮೈನರ್ ಇರಿಗೇಶನ್‌ಗೆ ಕೊಡಿ. ಇವತ್ತು ಅದರಲ್ಲಿ ಮಲೆನಾಡು ಜಿಲ್ಲೆ, ಕೋಲಾರ ಜಿಲ್ಲೆ, ಕೆಲವು ಬಿಜಾಪುರ ಪಾರ್ಟ್, ಕೆಲವು ಬೆಳಗಾಂ ಪಾರ್ಟ್, ಬೆಂಗಳೂರು ರೂರಲ್ ಇರಬಹುದು. ಅಲ್ಲಿ ಇವತ್ತು ಮೈನರ್ ಇರಿಗೇಷನನ್ನು ಮಾಡಬೇಕಾಗುತ್ತದೆ. ಲಿಫ್ಟ್ ಇರಿಗೇಷನನ್ನು ಮಾಡ ಬೇಕಾಗುತ್ತದೆ. ಚಿತ್ರದುರ್ಗ, ತುಮಕೂರು ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಪುನಃ ತಮ್ಮ ಮುಖಾಂತರ ಒತ್ತಾಯಿಸುತ್ತಿದ್ದೇನೆ, ಹೆಚ್ಚಿನ ಹಣವನ್ನು ಮೈನರ್ ಇರಿಗೇಷನ್‌ಗೂ ಕೊಡುವುದಕ್ಕೂ ಪ್ರಯತ್ನ ಮಾಡಿ.

ಛೇರ್ಮನ್ : ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಆರ್. ವಿ. ದೇಶಪಾಂಡೆ : ಇನ್ನೊಂದು ಸ್ವಲ್ಪ ಹೊತ್ತು ಬೇಕು. ಮುಗಿಸುತ್ತೇನೆ. ಸರ್ಕಾರ ಏನು ಮಾಡಿದೆ, ಇನ್ನು ಸ್ಕೀಮ್‌ಗಳು ಇವೆ, ಅದರ ಬಗ್ಗೆ ಹೇಳಬೇಕಲ್ಲ. ನಮಗೆ ಡಿಸ್ಟರ್‌ಬೆನ್ಸ್‌ನಲ್ಲಿ ಎಲ್ಲಾ ಟೈಮ್ ಹೋಗಿಬಿಡುತ್ತದೆ.

ಛೇರ್ಮನ್ : 2-45ಕ್ಕೆ ಶುರುಮಾಡಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ : ಅದರಲ್ಲಿ ಎಷ್ಟು ಡಿಸ್ಟರ್‌ಬೆನ್ಸ್ ಆಯಿತು ಎಂದು ತಮಗೆ ಗೊತ್ತೇ?

ಛೇರ್ಮನ್ : ನೀವು ಯೀಲ್ಡ್ ಆದರೆ ನಾನೇನು ಮಾಡಲಿ.

ಶ್ರೀ ಆರ್.ವಿ. ದೇಶಪಾಂಡೆ : ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ ಬಗ್ಗೆ ಹೇಳುವುದಾದರೆ ಇದಕ್ಕೆ ಏನಾಗಿದೆ ನಿಮ್ಮ ರಿಪೋರ್ಟ್ ಬಗ್ಗೆ, I am quoting your own report. ಏನು ಆಗಿದೆ ನಿಮ್ಮ 68 ಇಂಡಸ್ಟ್ರೀಗಳು ಇವುಗಳಲ್ಲಿ 1991ರ ತನಕ ಇನ್‌ವೆಸ್ಟ್‌ಮೆಂಟ್ ಎಷ್ಟು ಎಂದರೆ 4513 ಕೋಟಿ. 4513 ಕೋಟಿ ರೂಪಾಯಿಯನ್ನು 68 ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ನಲ್ಲಿ ನಾವು ಇನ್‌ವೆಸ್ಟ್ ಮಾಡಿದ್ದೇವೆ. ಬಾಕಿಯನ್ನು ನಾನು ಬಿಡುತ್ತೇನೆ. ಅದರಲ್ಲಿ 5 ಯೂನಿಟ್ಸ್ are making profits. KPC is

making profit. Five major units are incurring losses of Rs.26 crores.

ಸರ್ಕಾರ 4513 ಕೋಟಿ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಿದೆ. ಅದರಲ್ಲಿ ರಿಟನ್ ಎಷ್ಟು ಬರುತ್ತಿದೆ? Return is not even 1%. ನಿಮಗೆ 1 ಪರ್‌ಸೆಂಟ್ ಬಡ್ಡಿ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ನಿಂದ ಬರುತ್ತಿಲ್ಲ. ಇದರ ಬಗ್ಗೆ ವಿಚಾರ ಮಾಡುವುದು ಬೇಡವೇ? ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಪ್ರೊಫೆಷನಲ್ ಆ ರನ್ ಮಾಡಿರಿ, ಪ್ರೊಫೆಷನಲ್ ಪೀನಲ್ಲನ್ನು ಅಲ್ಲಿ ಹಾಕಿ. ಯಾವ ಇಂಡಸ್ಟ್ರಿಯನ್ನು ನಿಮಗೆ ರನ್ ಮಾಡುವುದಕಾಗುವುದಿಲ್ಲ ಬ್ಲೇಡ್ ಮಾಡಲಿಕ್ಕೆ ಹೊರಟಿದ್ದೇವೆ, ಸೋಪ್ ಮಾಡುವುದಕ್ಕೆ ಹೊರಟಿದ್ದೇವೆ. ನಮಗೆ ಮಾಡುವುದಕ್ಕೆ ಏನು ಬೇರೆ ಉದ್ಯೋಗ ಇಲ್ಲವೇ? ನೀವು ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ಎಲ್ಲಾ ಬ್ಲೇಮ್ ಅನ್ನು ನಿಮ್ಮ ಮೇಲೆ ಹಾಕಲಿಕ್ಕೆ ನಾನು ತಯಾರಿಲ್ಲ. ಆದರೆ ತಾವು ಅಧಿಕಾರದಲ್ಲಿದ್ದಾಗ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ . 4513 ಕೋಟಿ ಹಾಕಿದ ನಂತರ ಜನರೇಟ್ ಆಗಿದ್ದುದು 1 ಪರ್‌ಸೆಂಟ್ ಇಂಟರೆಸ್ಟ್. ಎಂಪ್ಲಾಯ್‌ಮೆಂಟ್ ಏನು, ಇಂಡಸ್ಟ್ರೀಸ್‌ಗೆ ಬರುತ್ತೇನೆ. ನಾನು ಮೇಜರ್ ಮತ್ತು ಮೀಡಿಯಂ ಇಂಡಸ್ಟ್ರೀಸ್ ಬಗ್ಗೆ ಹೇಳುವುದಿಲ್ಲ. ನೀವು ಅಧಿಕಾರದಲ್ಲಿ ಬಂದ ನಂತರ ಇಂಡಸ್ಟ್ರೀಸ್ ಎಷ್ಟು ಸ್ಥಾಪನೆಯಾದವು ನಿಮಗೆ ಗೊತ್ತೆ. 1990-91ರಲ್ಲಿ ಸ್ಮಾಲ್ ಸೆಕ್ಟಾರ್‌ನಲ್ಲಿ, I Could not get figures for major and medium industries, ಕೇವಲ 1184 ಸಣ್ಣ ಕೈಗಾರಿಕೆಗಳನ್ನು ಶುರುಮಾಡುವುದಕ್ಕೆ ಸಾಧ್ಯವಾಯಿತು 90-91ರಲ್ಲಿ. 91-92ರಲ್ಲಿ 674 ಅಷ್ಟೇ ಕೈಗಾರಿಕೆ. ಅದು ಇಂಡಸ್ಟ್ರೀಯಲ್ ಪ್ರೋಗ್ರೆಸ್ ಪವರ್ ಜನರೇಟ್ ಮಾಡುವುದಕ್ಕೆ ಹೊರಟರಲ್ಲಾ ಕಳೆದ ಮೂರು ವರ್ಷದಲ್ಲಿ ನಿಮಗೆ ಎರಡೂವರೆ ಸಾವಿರ ಸಣ್ಣ ಕೈಗಾರಿಕೆ ಈ ರಾಜ್ಯದಲ್ಲಿ ಶುರುಮಾಡುವುದಕ್ಕೆ ಆಗಿಲ್ಲ. ನಮ್ಮ ಕಾಲದಲ್ಲಿ We had programme to start 1000 industries per month. ಇವತ್ತು ಏನಾಗಿದೆ, ಎಂಪ್ಲಾಯ್‌ಮೆಂಟ್‌ಗೆ ಹೋಗುತ್ತೇನೆ. ಎಂಪ್ಲಾಯ್‌ಮೆಂಟ್ ಜನರೇಷನ್ ನೋಡಿ ಎಷ್ಟಾಗಿದೆ, ಎಂಪ್ಲಾಯ್‌ಮೆಂಟ್ ಎಷ್ಟೆಂದರೆ ತಾವು ಅಧಿಕಾರದಲ್ಲಿ ಬಂದಾಗ 10 ಲಕ್ಷ 82 ಸಾವಿರ ಜನರು ಅನ್‌ಎಂಪ್ಲಾಯ್ಡ್ ಇದ್ದರು. ನೀವು ಅಧಿಕಾರದಲ್ಲಿ ಬಂದಾಗ ಲೈವ್ ಸ್ಟಾಕ್ ರಿಜಿಸ್ಟರ್ ಮೇಲೆ ಡಿಪೆಂಡ್ ಆಗಿ ಹೇಳುತಿದ್ದೇನೆ, 10 ಲಕ್ಷ 82 ಸಾವಿರ ಜನರು ಯುವಕರು ನಿರುದ್ಯೋಗಿಗಳಿದ್ದರು. ಇವತ್ತು ಬಹಳ ಪರಿಶ್ರಮಪಟ್ಟಿರಿ, ಮೂರು ಮುಖ್ಯಮಂತ್ರಿಗಳನ್ನು ಮಾಡಿದಿರಿ. ಬಹಳ ಒಳ್ಳೆ ಒಳ್ಳೆಯ ಕಾರ್ಯಕ್ರಮ ಮಾಡಿದಿರಿ, ಬಹಳ ಒಳ್ಳೆಯ ಕೈಗಾರಿಕೆಗಳು ಬೆಳೆದಿದೆ. ಇವತ್ತು ಎಷ್ಟು ಜನ ಆಗಿದ್ದಾರೆ ಎಂದರೆ 14 ಲಕ್ಷ 91 ಸಾವಿರ ಅನ್ ಎಂಪ್ಲಾಯ್ಡ್. ಕಳೆದ ನಿಮ್ಮ ಮೂರುವರೆ ವರ್ಷದ ಅಧಿಕಾರದಲ್ಲಿ 4 lakhs unemployed were increased. ಇದಕ್ಕೆ ಜವಾಬ್ದಾರಿ ಯಾರು ? ಇದಕ್ಕೆ ಉತ್ತರವನ್ನು ಯಾರು ಕೊಡುವರು? ಇದಕ್ಕೆ ತಾವೇ ದೋಷಿಗಳು. ಇದು ನಿಮ್ಮ ಪಾಪ. ಹಾಗಾಗಿ ಹೇಳುತ್ತಿದ್ದೇನೆ . ತಾವು ಕೇವಲ ಪೊಳ್ಳು ಘೋಷಣೆ ಅಷ್ಟೆ ಮಾಡಿದೀರಿ ವಿನಹ, ರಿಸಲ್ಟ್ ಓರಿಯೆಂಟೆಡ್ ನಿಮ್ಮ ಕಡೆಯಿಂದ ಏನೂ ಆಗಿಲ್ಲ. You have not achieved anything tangible. ಏನೂ ನೀವು ಮಾಡುವುದಕ್ಕೆ ಆಗಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ನೀವು ಎಂಪ್ಲಾಯ್‌ಮೆಂಟ್ ಕೊಟ್ಟಿದ್ದುದು 94 ಸಾವಿರ ಜನಕ್ಕೆ. ಇದನ್ನು ತಾವು ವಿಚಾರ ಮಾಡಬೇಕಾಗಿದೆ. ನೀವು ಚುನಾವಣೆಗೆ ಹೋಗಬೇಕಲ್ಲ. ನಿಮ್ಮ ಕಾರ್ಯಕ್ರಮ ಸರಿಯಿಲ್ಲವೇನು? ನಿಮ್ಮ ಪ್ಲಾನ್ ಪ್ರಿಯಾರಿಟೀಸ್ ಸರಿಯಿಲ್ಲವೇನು ಇದರ ಬಗ್ಗೆ ರೀಕನ್ಸಿಲಿಯೇಷನ್ ಆಗಬೇಕು. ಯುವಕರು ನಿಮ್ಮ ಕಡೆಯಿಂದ ದೂರ ಹೋಗುತ್ತಿದ್ದಾರೆ . ಏಕೆ ನಿಮ್ಮಲ್ಲಿ ವಿಶ್ವಾಸ ಇಡಬೇಕು? 10 ಲಕ್ಷ ಇದ್ದ ಅನ್ ಎಂಪ್ಲಾಯ್‌ಮೆಂಟ್ 14 ಲಕ್ಷ ಹೋಗಿ ನಾಲ್ಕು ಲಕ್ಷ ಹೆಚ್ಚಾದರೆ ಏಕೆ ನಿಮ್ಮನ್ನು ನಂಬಬೇಕು? ಏನು ಮಾಡಿದ್ದೀರಿ ಎಂದು ನಿಮ್ಮನ್ನು ನಂಬಬೇಕು? ಇವತ್ತು ಪವರ್

ಜನರೇಷನ್‌ನಲ್ಲಿ ತಾವು ಫೇಲ್ಯೂರ್ ಆದಿರಿ, ತಮ್ಮ ಫೇಲ್ಯೂರ್ ಇರಿಗೇಷನ್ ಪೋಟೆನ್‌ಷಿಯಲ್‌ನಲ್ಲಿಯೂ ಇದೆ. ಎಂಪ್ಲಾಯ್‌ಮೆಂಟ್ ಪೊಟೆನ್ಸಿಯಲ್ ಕ್ರಿಯೇಟ್ ಮಾಡುವುದಕ್ಕೆ ಆಗಲಿಲ್ಲ. ಇಂಡಸ್ಟ್ರೀಸ್ ಪೊಟೆನ್ಸಿಯಲ್ ಕ್ರಿಯೆಟ್ ಮಾಡುವುದಕ್ಕೆ ಆಗಲಿಲ್ಲ. ನಾನು ನಿಮ್ಮ ಸ್ಕೀಮ್‌ಗೆ ಬರುತ್ತೇನೆ. ವಿಶ್ವ- ಕಾರ್ಯಕ್ರಮದ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ಅವರು ಹೋದರೆಂದು ಕಾಣುತ್ತದೆ. ವಿಶ್ವ- ಈ ಸ್ಕೀಮ್‌ನ ಲಾಂಚ್ ಮಾಡುವುದಕ್ಕೆ ಪ್ರೈಮ್ ಮಿನಿಸ್ಟರ್ ಅವರನ್ನು ಕರೆದುಕೊಂಡು ಬಂದಿರಿ. ಎಂಪ್ಲಾಯ್‌ಮೆಂಟ್ ಜನರೇಷನ್ ಆಗಬೇಕು. ಯುವಕರಿಗೆ ಒಳ್ಳೆಯದಾಗಬೇಕು, ಒಳ್ಳೆಯ ಉದ್ದೇಶದಿಂದ ಮಾಡಿದ್ದೀರಿ, ಸಂತೋಷ. ಏನು ಆಯಿತು? 1991-92ನೇ ಇಸವಿಯಲ್ಲಿ ತಾವು ಬಜೆಟ್ ಪ್ರಾವಿಜನ್ ಮಾಡಿದ್ದುದು 10 ಕೋಟಿ ರೂಪಾಯಿ. ತಾವು ಎಷ್ಟು ಖರ್ಚು ಮಾಡಿದ್ದೀರಿ? 3 ಕೋಟಿ 77 ಲಕ್ಷ ರೂಪಾಯಿ , ಏಕೆ ? ಏನು ಸಮಸ್ಯೆ ಆಯಿತು ನಿಮಗೆ? ಈ ಕಾರ್ಯಕ್ರಮದಲ್ಲಿ ನಿಮಗೆ ವಿಶ್ವಾಸವಿದ್ದರೆ ನೀವು ಬಜೆಟ್‌ನಲ್ಲಿ ಕೊಟ್ಟ ಹಣ ಏಕೆ ಖರ್ಚು ಆಗಲಿಲ್ಲ? ಇದಕ್ಕೆ ಕಾರಣಗಳು ಏನು? 1992-93ನೇ ಇಸವಿಯಲ್ಲಿ 75 ಕೋಟಿ ರೂಪಾಯಿಯನ್ನು ಮಾನ್ಯ ಬಂಗಾರಪ್ಪನವರು ವಿಶ್ವ ಕಾರ್ಯಕ್ರಮಕ್ಕೆ ಕೊಟ್ಟರು. ಆ ಕಾರ್ಯಕ್ರಮದ ಮೇಲೆ ಅವರಿಗೆ ವಿಶ್ವಾಸ ಇತ್ತು. ಏನು ಆಯಿತು? ನೀವು ಖರ್ಚು ಮಾಡಿದ ಹಣ ಡಿಸೆಂಬರ್ 92ರತನಕ 11 ಕೋಟಿ 92 ಲಕ್ಷ ರೂಪಾಯಿ. ರಿಸೋರ್ಸ್ ಮೊಬಲೈಸೇಷನ್ ಮಾಡಿದ್ದೇವೆ, ಬಹಳ ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು. ನಮಗೆ ಹೇಳುತ್ತೀರಿ. ಎಲ್ಲಿ ಹೋಯಿತು ಹಣ? 75 ಕೋಟಿ ರೂಪಾಯಿನಲ್ಲಿ ಡಿಸೆಂಬರ್ 92ರವರೆಗೆ ನೀವು ಖರ್ಚು ಮಾಡಿದ ಹಣ 11 ಕೋಟಿ 77 ಲಕ್ಷ ರೂಪಾಯಿ. ಅಂದರೆ ಯಾವ ಕಾರ್ಯ ಕ್ರಮದಲ್ಲಿಯೂ ನಿಮಗೆ ವಿಶ್ವಾಸ ಇಲ್ಲ. ಅದಕ್ಕೆ ನಾನು ಹೇಳಿದೆ. ಒಬ್ಬ ಮುಖ್ಯಮಂತ್ರಿ ಬಂದರೆ ಒಂದು ಕಾರ್ಯಕ್ರಮ ಘೋಷಣೆ ಮಾಡುತ್ತಾರೆ. ಮತ್ತೊಬ್ಬ ಮುಖ್ಯ ಮಂತ್ರಿ ಬಂದರೆ ಆ ಕಾರ್ಯಕ್ರಮದಲ್ಲಿ ವಿಶ್ವಾಸ ಇಲ್ಲ. ಇವತ್ತು ನಿಮ್ಮ ಕಾರ್ಯಕ್ರಮ, ಸರ್ಕಾರದ ಕಾರ್ಯಕ್ರಮ. ಆ ಕಾರ್ಯಕ್ರಮದಲ್ಲಿ ವಿಶ್ವಾಸವಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ. ತಾವು ಹೇಳಿದಿರಿ ವಿಶ್ವ ಬಿಟ್ಟಿಲ್ಲ ಎಂದು. ಇದೆ, ಇದರ ಬಗ್ಗೆ ಚಿತ್ರ ಕೊಡುತ್ತೇನೆ. ಬಜೆಟ್‌ನಲ್ಲಿ ಕೊಟ್ಟ ಹಣ ಏಕೆ ಖರ್ಚು ಮಾಡಿಲ್ಲ. ಏಕೆ ಎಂಪ್ಲಾಯ್‌ಮೆಂಟ್ ಜನರೇಷನ್ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ? ಏಕೆಂದರೆ ಮುಖ್ಯಮಂತ್ರಿಯವರಿಗೆ ನಿಮ್ಮ ಕ್ಯಾಬಿನೆಟ್ ವಿಶ್ವಾಸ ಈ ಕಾರ್ಯಕ್ರಮಮದಲ್ಲಿ ಇಲ್ಲ . ಈಗ ತಾವು ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಒಂದೇ ತಿಂಗಳೊಳಗೆ ಏನು ಮಾಡಲಿಕ್ಕೆ ಸಾಧ್ಯ? ನಾನು ಏಕೆ ಹೇಳಿದೆ ಅಂದರೆ, ಆ ಯೋಜನೆಯಲ್ಲಿ ವಿಶ್ವಾಸ ಇಲ್ಲ ಎಂದು ಮಾತನಾಡಬೇಡಿ. ವಿಶ್ವಾಸ ಇದೆ. ಏನೋ ತೊಂದರೆ ಇದೆ . ಅದನ್ನು ಸರಿಪಡಿಸಿಕೊಂಡು ಮುಂದುವರಿಸುತ್ತೇವೆ. ತಾವು ಕೇಳಿದ್ದೀರಿ, ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಒಂದು ಲಕ್ಷ ಚಿಲ್ಲರೆ ಮನೆಗಳನ್ನು 93-94ರಲ್ಲಿ ಮುಗಿಸುತ್ತೇವೆಂದು ಹೇಳಿ ಬಜೆಟ್‌ನಲ್ಲಿ ಅದಕ್ಕೆ ಹಣವನ್ನು ಒದಗಿಸಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಕಾರ್ಯಕ್ರಮಗಳಲ್ಲಿ ವಿಶ್ವಾಸ ಇದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಕಾರ್ಯಕ್ರಮದಲ್ಲಿ ವಿಶ್ವಾಸ ಇಲ್ಲ ಎಂದು ಏಕೆ ಹೇಳುತ್ತಿದ್ದೇನೆಂದರೆ , ಯಾವ ಕಾರ್ಯಕ್ರಮ ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕೆ ಅನ್‌ನೆಸಸರಿಯಾಗಿ ಹ್ಯಾಪಿ ಪ್ರಾವಿಜನ್ ಮಾಡುತ್ತೀರಿ? ಪ್ರಾಕ್ಟಿಕಲ್ ಆಗಿ ಮಾಡಿ. ಆದ್ದರಿಂದ ತಾವು ಇದರಲ್ಲಿ ವಿಫಲರಾಗಿದ್ದೀರಿ. ಆಶ್ರಯ ಸ್ಕೀಮ್ ಬಗ್ಗೆ ಹೇಳಿದ್ದೀರಿ. ತಾವು ಪುನಃ ಹೇಳಿದ್ದೀರಿ. ಜೂನ್‌ವರೆಗೆ 160.50 ಕೋಟಿ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ ನನಗೆ ಡೌಟ್ ಇದೆ. ನೀವು ಖರ್ಚು ಮಾಡಿದ್ದರೆ, ನಿಮಗೆ ಅಭಿನಂದಿಸುತ್ತೇನೆ. ಏಕೆಂದರೆ ಹಿಂದೆ ನಿಮ್ಮ ಅನುಭವ ನೋಡಿದರೆ ಸಾಧಾರಣ 223 ಕೋಟಿ

ರೂಪಾಯಿಯನ್ನು ತಾವು ಬಿಟ್ಟಿದ್ದೀರಿ. ನೀವು ಕಟ್ಟಿದ ಮನೆಗಳು ಡಿಸೆಂಬರ್ ತನಕ 500 ಎಂದು ಹೇಳಿದ್ದೀರಿ. ತಾವು ಹಣ ಖರ್ಚು ಮಾಡುತ್ತೀರಿ ಎನ್ನುವ ವಿಶ್ವಾಸ ಇದರಲ್ಲಿ ಇಲ್ಲ. Totally the entire housing scheme has come to a standstill, in the STATE. ಇದಲ್ಲದೆ ರೈತರ ಬಗ್ಗೆ ನೀವು ಏನು ಮಾಡಿದ್ದೀರಿ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಸೈಟ್ಸ್‌ಗಳನ್ನು ಕೊಟ್ಟು, ಒಳ್ಳೆಯದ್ದನ್ನು ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಸೈಟುಗಳನ್ನು ಕೊಟ್ಟಿದ್ದೀರಿ. ಒಪ್ಪಿಕೊಳ್ಳುತ್ತೇವೆ. ಒಳ್ಳೆಯ ಕೆಲಸ ಮಾಡಿದ ಬಗ್ಗೆ ತಾವು ಹೇಳುತ್ತಿದ್ದೀರಿ, ನಾನು ಏತಕ್ಕೆ ಹೇಳಲಿ. ಇವತ್ತು ನಾಡಿನ ರೈತ ಎಷ್ಟೊಂದು ಕಷ್ಟದಲ್ಲಿದ್ದಾನೆ. ಇವತ್ತು ಅವನ ಸಲುವಾಗಿ ತಾವು ಮಾಡಿದ್ದು ಏನು? ನಿಮ್ಮ ಬಜೆಟ್‌ನಲ್ಲಿ ಇಂಟರೆಸ್ಟ್ ಸಬ್ಸಿಡಿಗೆ ಇನ್‌ಸೆಂಟಿವ್ಸ್ ಕೊಡುವುದು ಇತ್ತು. ಕಳೆದ ವರ್ಷದ ಇಂಟರೆಸ್ಟ್ ಸಬ್ಸಿಡಿಯನ್ನು ಕೊಡಲಿಕ್ಕೆ ಆಗಿಲ್ಲ. ಅದು ಸುಮಾರು 20-26 ಕೋಟಿ ಬಾಕಿ ಇದೆ. ಮಲೆನಾಡು ಅಭಿವೃದ್ಧಿ ಮಂಡಲಿಗೆ ತಾವೇ ಛೇರ್ಮನ್ನರು, ತಾನೇ ಹೇಳಿ. ಲಿಸ್ಟ್ ಕೊಡಿರಿ ಎಂದು ನಮಗೊಂದು ಹತ್ತು ಸಾರಿ ಹೇಳಿದರು.

ಶ್ರೀ ಜೆ. ಸಿ. ಮಾಧುಸ್ವಾಮಿ : ತೋಟಗಾರಿಕೆ ಮಂತ್ರಿಯವರಿಗೆ ಎದ್ದೇಳುವುದಕ್ಕೆ ಹೇಳಿ ಸದನದಲ್ಲಿ ನಿದ್ದೆ ಮಾಡಿದರೆ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ : ರಾಜ್ಯದ ರೈತ ಇಷ್ಟೊಂದು ಕಷ್ಟದಲ್ಲಿದ್ದಾನೆ. ತಾವು ಏನು ಮಾಡಿದ್ದೀರಿ. ಬರಗಾಲ ಬಿತ್ತು, ಅದರ ನಂತರ ಸ್ವಲ್ಪ ಸ್ವಲ್ಪ ಏನು ಬೆಳೆ ಬಂತು ಅದರ ಬೆಲೆ ಕುಸಿದುಹೋಗಿದೆ. ನಿಮ್ಮ ಕಡೆಯಿಂದ ವಿದ್ಯುಚ್ಛಕ್ತಿಯನ್ನು ಪಂಪುಸೆಟ್ಟುಗಳಿಗೆ ಕೊಡುವುದಕ್ಕೆ ಆಗಿಲ್ಲ. ನೆರೆಹಾವಳಿಯಿಂದ ರೈತ ಕಷ್ಟದಲ್ಲಿದ್ದಾನೆ. ನಿಜವಾಯೂ ನಿಮಗೆ ರೈತರ ಬಗ್ಗೆ ಕಮಿಟ್‌ಮೆಂಟ್ ಇದ್ದರೆ ಸಾಲ ಮನ್ನಾ ಮಾಡಲಿಕ್ಕೆ ಬರುವುದಿಲ್ಲ ಅಂದರೂ ಬಡ್ಡಿ, ದಂಡದ ಬಡ್ಡಿಯನ್ನು ಮನ್ನಾ ಮಾಡುತ್ತಿದ್ದೀರಿ. ನೀವು ಏನು ಮಾಡಿದ್ದೀರಿ ಅಂದರೆ ಈ ವರ್ಷದ ಬಜೆಟ್‌ನಲ್ಲಿ ನೀವು ಕೊಟ್ಟ ಹಣ 5 ಕೋಟಿ ರೂಪಾಯಿ. ಅದು ಸ್ಮಾಲ್ ಅಂಡ್ ಮಿಡಿಯಂ ಫಾರ್‌ಮರ್ಸ್ ಎಲ್ಲರಿಗೂ ಅಲ್ಲ. 5 ಕೋಟಿ ರೂಪಾಯಿಯಲ್ಲಿ ನೀವು ರೈತರಿಗೆ ಸಹಾಯ ಮಾಡಲಿಕ್ಕೆ ಆಗುತ್ತದೆಯೇ? ಗೊಬ್ಬರಕ್ಕೆ 27 ಕೋಟಿ ರೂಪಾಯಿ,ರೈತರಿಗೆ ಬಹಳ ದೊಡ್ಡ ಅನ್ಯಾಯವನ್ನು ಮಾಡಿದ್ದೀರಿ ಈ ರಾಜ್ಯದ ರೈತರಿಗೆ ನೀವು ಮೋಸ ಮಾಡಿದ್ದೀರಿ. ನಿಮಗೆ ರೈತರ ಬಗ್ಗೆ ನಿಜವಾಗಿಯೂ ಕಳಕಳಿ ಇದ್ದರೆ ರಾಜ್ಯದ ಎಲ್ಲಾ ರೈತರಿಗೆ ಇಂಟರೆಸ್ಟ್ ಸಬ್ಸಿಡಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಿರಿ. ಸರಿಯಾದ ಪ್ರಾವಿಜನ್ ಮಾಡಿ 5 ಕೋಟಿಯಲ್ಲಿ ನೀವು ಮಾಡಲಿಕ್ಕೆ ಆಗುವುದಿಲ್ಲ. ಈ ರಾಜ್ಯದ ರೈತ ಈ ವರ್ಷ ಏನು ಕಷ್ಟದಲ್ಲಿದ್ದಾನೆ. ಯಾವಾಗಲೂ ಇಂಥ ಕಷ್ಟದಲ್ಲಿ ಇರಲಿಲ್ಲ. Consider waiving of interest and penal interest.

ನಾವು ಅಧಿಕಾರದಲ್ಲಿದ್ದಾಗ ಮಾಡಿದ್ದೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಆ ಅನುಕೂಲ, ರೈತರಿಗೆ ಮಾಡಿಕೊಟ್ಟಿತ್ತು. ಒನ್‌ಟೈಂ ಆಪರೇಷನ್ ತಾವು ಮಾಡಿದರೆ ಸಾಕಷ್ಟು ರೈತರಿಗೆ ಅನುಕೂಲವಾಗಲಿಕ್ಕೆ ಸಾಧ್ಯವಾಗಬಹುದು . ಇವತ್ತು ನಿಮ್ಮ ಶುಶ್ರೂಷಾ ಕಾರ್ಯಕ್ರಮಕ್ಕೆ ಬರುತ್ತೇನೆ. ಶುಶ್ರೂಷಾ ಕಾರ್ಯಕ್ರಮದಲ್ಲಿ ನಿಮ್ಮ ಬಜೆಟ್ ಎಷ್ಟಿದೆ ಅಂದರೆ ಒಂದು ಕೋಟಿ ರೂಪಾಯಿ ಇದೆ. ನೀವು ಖರ್ಚು ಮಾಡಿದ್ದು 1991-92ರಲ್ಲಿ 29 ಲಕ್ಷ ರೂಪಾಯಿ, ಅದಾದನಂತರ 1992-93ನೇ ಇಸವಿಯಲ್ಲಿ ತಾವು ಖರ್ಚು ಮಾಡಿದ್ದುದು

7 ಲಕ್ಷ 95 ಸಾವಿರ ರೂಪಾಯಿ. ಕಾರ್ಯಕ್ರಮವನ್ನು ತಾವೇನು ಮಂಜೂರು ಮಾಡಿದ್ದೀರಿ ಆ ಎಲ್ಲಾ ಕಾರ್ಯಕ್ರಮಕ್ಕೆ ತಾವು ತಿಲಾಂಜಲಿ ಕೊಟ್ಟೆನೆಂದು ಹೇಳಿದಿರಲ್ಲಾ, ನಾನು ಕೇಳುತ್ತಿದ್ದೇನೆ 1 ಕೋಟಿ ರೂಪಾಯಿ ಶುಶ್ರೂಷಾ ಕಾರ್ಯಕ್ರಮದಲ್ಲಿ ಪ್ರಾವಿಜನ್ ಇತ್ತು. ಈ ವರ್ಷ ನೀವು ಖರ್ಚು ಮಾಡಿದ್ದ ಹಣ ಡಿಸೆಂಬರ್ ತನಕ 7 ಲಕ್ಷ ರೂಪಾಯಿ. ಏತಕ್ಕೆ ಇಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಅದರ ಅವಶ್ಯಕತೆ ಏನಿತ್ತು? ಈ ಕಾರ್ಯಕ್ರಮದಲ್ಲಿ ವಿಶ್ವಾಸ ಇಲ್ಲ ಅಂದರೆ, ಇವತ್ತು ಈ ಕಾರ್ಯಕ್ರಮವನ್ನು ಏಕೆ ಇಟ್ಟುಕೊಳ್ಳುತ್ತೀರಿ ಪ್ರಾಮಾಣಿಕವಾಗಿ ಹೇಳಿ? ಬಂಗಾರಪ್ಪನವರಿಗೆ ಬಹಳಷ್ಟು ಬೇಜಾರಾಗಬಹುದೆಂದು ಕೆಲವು ಕಾರ್ಯಕ್ರಮಗಳನ್ನು ತಾವು ಮುಂಗಡ ಪತ್ರದಲ್ಲಿ ಇಟ್ಟುಕೊಂಡು ಅದಕ್ಕೆ ಗ್ರಾಂಟ್ ಕೊಟ್ಟು ಈ ಪ್ರಕಾರ ಮಾಡುವುದು ಸರಿಯಲ್ಲ. ಹೊಸ ಹೊಸ ಕಾರ್ಯಕ್ರಮ ಏನು ಮಾಡಲು ಅನೌನ್ಸ್ ಮಾಡಿದ್ದೀರಿ ಅದನ್ನು ಇಂಪ್ರೂವ್‌ಮೆಂಟ್ ಮಾಡಲು ಬಹಳ ಕಷ್ಟ ಇದೆ.

4.30 ಪಿ. ಎಂ.

Let us go to Agriculture. ಕೃಷಿ ಉತ್ಪನ್ನ ನಿಮ್ಮ ಕಾಲದಲ್ಲಿ ಹೇಗಿತ್ತು ಎಂಬುದನ್ನು ನೋಡಿ. ನೀವು ರೈತರಿಗೆ ಉತ್ತೇಜನ ಕೊಡುತ್ತಿಲ್ಲ, ಅವರಿಗೆ ಇನ್‌ಸೆಂಟಿವ್ ಕೊಡುತ್ತಿಲ್ಲವೆಂದು ಹೇಳಿದೆ. ಇದರ ಪರಿಣಾಮವಾಗಿ 1990-91ನೇ ಇಸವಿಯಲ್ಲಿ ಸೀರಿಲ್ ಟಾರ್ಗೆಟ್ 73 ಲಕ್ಷ ಇದ್ದದ್ದು ನಿಮ್ಮ ಸಾಧನೆ 57.75 ಲಕ್ಷ ಟನ್ ಆಗಿದೆ. ಪಲ್ಸಸ್‌ನಲ್ಲಿ 1992-93ರ ಎಕಾನಾಮಿಕ್ ಸರ್ವೆಯಂತೆ 77 ಲಕ್ಷ ಟನ್ ಟಾರ್ಗೆಟ್ ಇತ್ತು, ಸಾಧನೆ 5.39 ಲಕ್ಷ ಆಯಿಲ್ಸ್ ಸೀಡ್‌ನಲ್ಲಿ ಒಟ್ಟು 180 ಲಕ್ಷ ಇದ್ದದು ಸಾಧನೆ 62 ಲಕ್ಷವಾಗಿದೆ. We were proud that Karnataka was number one. ಇವೊತ್ತು ಆಯಿಲ್ ಸೀಡ್ಸ್‌ನ ಪೊಜಿಷನಲ್‌ನಲ್ಲಿ ಗುಜರಾತ್ ನಿಮ್ಮನ್ನು ಹಿಂದೆ ಹಾಕಿ ಮುಂದೆ ಹೋಗಿದೆ. ನಿಮ್ಮ ಆಯಿಲ್ ಸೀಡ್ಸ್ ಪೊಜಿಷನ್ 17.20 ಲಕ್ಷ ಟನ್ ಇದ್ದರೆ ನಿಮ್ಮ ಸಾಧನೆ 13.39 ಲಕ್ಷ ಟನ್‌ಗಳಾಗಿವೆ. ಅದೇ ಪ್ರಕಾರ ಕಾಟನ್‌ಟಾರ್ಗೆಟ್ 8.60 ಲಕ್ಷ ಇದ್ದರೆ ನಿಮ್ಮ ಸಾಧನೆ 6.40 ಲಕ್ಷ ಟನ್ 91-92ಕ್ಕೆ ಸೀರಿಲ್ ಟಾರ್ಗೆಟ್ ಇದ್ದುದು 77.48 ಲಕ್ಷ ಟನ್, ನಿಮ್ಮ ಸಾಧನೆ 72 ಲಕ್ಷ ಟನ್‌ಗಳಾಗಿವೆ. ಪಲ್ಸಸ್ ಟಾರ್ಗೆಟ್ 7.57 ಲಕ್ಷ ಟನ್ ಇದ್ದರೆ ಸಾಧನೆ ಸ್ವಲ್ಪ ಮಟ್ಟಿಗೆ ಅಂದರೆ, 8.10 ಟನ್ ಇದೆ. ಒಟ್ಟಾರೆ 85 ಲಕ್ಷ ಟನ್ ಟಾರ್ಗೆಟ್‌ಗೆ ಸಾಧನೆ 18 ಲಕ್ಷ ಟನ್ ಆಗಿವೆ.ಅದೇ ರೀತಿ 1992-93ರಲ್ಲಿ ಸಿರಿಲ್ ಟಾರ್ಗೆಟ್ 75.50 ಲಕ್ಷ ಟನ್ ಇದ್ದರೆ ಸಾಧನೆ 68.94 ಲಕ್ಷ ಟನ್‌ಗಳಾಗಿವೆ, ಪಲ್ಸಸ್ ಟಾರ್ಗೆಟ್ 8.35 ಲಕ್ಷ ಟನ್ ಇದ್ದರೆ ಸಾಧನೆ 58 ಲಕ್ಷ ಟನ್‌ಗಳಾಗಿವೆ. ಹಾಗಾಗಿ ಕಳೆದ ಮೂರು ವರ್ಷಗಳಲ್ಲಿ ನೀವು ಅಧಿಕಾರಕ್ಕೆ ಬಂದ ನಂತರ ಪರಿಸ್ಥಿತಿ ಏನಾಗಿದೆಯೆಂದರೆ ಕೃಷಿ ಉತ್ಪನ್ನ ಕುಸಿದಿದೆ, ಇದಕ್ಕೆ ಕಾರಣವೇನು? ಬರಗಾಲ ಬಂತೆಂದು ತಾವು ಹೇಳಬಹುದು. ನಾನು ಒಪ್ಪಿಕೊಳ್ಳುತ್ತೇನೆ. That may be one of the reasons. ಮುಖ್ಯವಾದ ಕಾರಣವೇನೆಂದರೆ, ಕೃಷಿಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೊ , ರೈತರಿಗೆ ಎಷ್ಟು ಇನ್‌ಸೆಂಟಿವ್, ಕೊಡಕಾಗಿತ್ತೋ ಅಷ್ಟು ಕೊಟ್ಟಿಲ್ಲ. ಇದೇ ಪ್ರಮುಖ ಕಾರಣ. ಇನ್ನು ಡ್ರೈಲ್ಯಾಂಡ್ ಫಾರ್ಮಿಂಗ್ ಬಗ್ಗೆ. Constructive farming you have forgotten. ಕಳೆದ 4 ವರ್ಷಗಳಲ್ಲಿ ಡ್ರೈಲ್ಯಾಂಡ್ ಫಾರ್ಮಿಂಗ್‌ನಲ್ಲಿ ಏನು ಮಾಡಿದ್ದೀರಿ? ಏನು ಸಾಧನೆಯಾಗಿದೆ? ಇವೊತ್ತು ಕೃಷಿ ಕ್ಷೇತ್ರವೇ ದೇಶದ ಬೆನ್ನೆಲುಬು, ರೈತ ನಮ್ಮ ದೇಶದ ಬೆನ್ನೆಲುಬು ಮತ್ತು ಭಾರತ ಕೃಷಿ ಪ್ರಧಾನವಾದ ದೇಶ ಎಂದು ಏನು ಹೇಳುತ್ತಿದ್ದೀರಿ, ಇವೆಲ್ಲವನ್ನೂ ನೀವು ಮರೆತು ಬಿಟ್ಟಿರಿ. ಕೃಷಿಗೆ ನಿಮ್ಮ ಬಜೆಟ್‌ನಲ್ಲಿ ಯಾವುದೇ ಆದ್ಯತೆ ಕೊಟ್ಟಿಲ್ಲ. ನಿಮ್ಮ ಕೃಷಿ ನೀತಿ ಏನಿದೆಯೆಂದು ಹೇಳಿಲ್ಲ, ವಾಟರ್ ಶೆಡ್ ಡೆವಲಪ್ ಮೆಂಟ್ ಪ್ರೋಗ್ರಾಂ ಬಗ್ಗೆ ಏನೂ ಹೇಳಿಲ್ಲವಾದ್ದರಿಂದ ಇದರ ಬಗ್ಗೆ

ನಾವು ಇದನ್ನು ನಂಬುವುದಕ್ಕೆ ಸಿದ್ಧರಿಲ್ಲ. ಬರಗಾಲವೆನ್ನುವುದು ಒಂದು ಕಾರಣವಿರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಬರಗಾಲ ಇರಲಿಲ್ಲ, ಈ ವರ್ಷ ಬರಗಾಲವಿತ್ತು, ಒಳ್ಳೆಯ ಮಳೆ ರಾಜ್ಯದಲ್ಲಾಗಿದೆ. ಆದರೂ ಕೂಡ ಕೃಷಿ ಉತ್ಪಾದನೆ ಕುಂಠಿತಗೊಳ್ಳುವುದಕ್ಕೆ ಕಾರಣವೇನು? ಇದರ ಬಗ್ಗೆಯೂ ತಾವು ನನಗೆ ವಿವರಣೆ ಕೊಡಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಆಪಾದನೆ ಮಾಡುತ್ತಿದ್ದೇನೆ . ನಿಮ್ಮ Agriculture policy is not healthy. It is not in the interest of the farmers. ಈ ಕೃಷಿ ನೀತಿ ರೈತರ ವಿರೋಧಿಯಾಗಿದೆ. ಆದುದರಿಂದ, ಇವೊತ್ತು ಇಂಥ ಪರಿಸ್ಥಿತಿ ಬಂದಿದೆ. ಇನ್ನು ಮನೆಗಳ ವಿಚಾರದ ಬಗ್ಗೆ . Let us go to other schemes ನೀವು ಟ್ರೈಬಲ್ ಸಬ್‌ಪ್ಲಾನ್‌ನಲ್ಲಿ 1989-90ನೇ ಸಾಲಿನಲ್ಲಿ ಕಟ್ಟಿರುವ ಒಟ್ಟು ಮನೆಗಳು 324, 1990-91ನೇ ಸಾಲಿನಲ್ಲಿ 600 ಮನೆಗಳು, 1989-90ನೇ ಸಾಲಿನಲ್ಲಿ ಇಂದಿರಾ ಅವಾಸ್ ಯೋಜನೆಯಡಿ ನೀವು ಕಟ್ಟಿರುವ ಮನೆಗಳು ಒಟ್ಟು 4153, 1990-91ನೇ ಸಾಲಿನಲ್ಲಿ 4000 ಮನೆಗಳು ಆಂಟಿಸಿಪೇಟೆಡ್ ಆಗಿವೆ. ತದನಂತರ ಅರ್ಬನ್ ಹೌಸಿಂಗ್‌ನಲ್ಲಿ 1989-90ನೇ ಸಾಲಿನಲ್ಲಿ ಕಟ್ಟಿರುವ ಮನೆಗಳು 992, 1990-91ನೇ ಸಾಲಿನಲ್ಲಿ 1600 ಮನೆಗಳು. ಈ ಎಲ್ಲಾ ಮನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸಹ ಕಳೆದ ಮೂರು ವರ್ಷಗಳಲ್ಲಿ ನೀವು ಅಧಿಕಾರಕ್ಕೆ ಬಂದ ನಂತರ ರಾಜ್ಯದ ಬಡ ಜನರ ಬಗ್ಗೆ ಮಾತನಾಡಿ ಇಷ್ಟೊಂದು ಮನೆಗಳನ್ನು ಪಟ್ಟಣ-ಪ್ರದೇಶಗಳಲ್ಲಿ ಕಟ್ಟಿಕೊಟ್ಟಿದ್ದೇವೆಂದು ಹೇಳಿದ್ದೀರಲ್ಲಾ, ಅದು ಭಾಗ್ಯಜ್ಯೋತಿ ಇರಬಹುದು , ಕಡಿಮೆ ವೆಚ್ಚದ ಮನೆಗಳಿರಬಹುದು ಅಥವಾ ಹೌಸಿಂಗ್ ಬೋರ್ಡ್ ಮನೆಗಳಿರಬಹುದು, ಅಥವಾ ಹಳ್ಳಿಗಳಲ್ಲಿ ಇಂದಿರಾ ಅವಾಸ್ ಯೋಜನೆಯ ಮನೆಗಳಿರಬಹುದು. ಆಶ್ರಯ ಯೋಜನೆಯ ಮನೆಗಳಿರಬಹುದು. ಕಳೆದ ಮೂರುವರೆ ವರ್ಷಗಳಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ 6-7 ಸಾವಿರ ಮೀರುವುದಿಲ್ಲ. ಇದೇ ನೀವು ಜನರಿಗೆ, ಬಡವರಿಗೆ ಕೊಟ್ಟ ಕೊಡುಗೆ , ಇದಕ್ಕಾಗಿಯೇ ಅವರು ನಿಮಗೆ ಓಟನ್ನು ಕೊಟ್ಟಿದ್ದುದು? ಹೇಳಿ, ಅದೇ ಪ್ರಕಾರ ತಾವು ಮಾಡುತ್ತೇವೆಂದು ಹೇಳುವುದಾದರೆ ಅದಕ್ಕೂ ಆಗಬಹುದು, ಇವತ್ತು ತಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ ತಾವು ಪ್ರಾಮಾಣಿಕವಾಗಿ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ, ತಮ್ಮ ಕಡೆ ತಪ್ಪಾಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ತಾವು ಪವರ್ ಸೆಕ್ಟಾರ್‌ನಲ್ಲಿ ವಿಫಲರಾಗಿದ್ದೀರಿ, ನೀರಾವರಿಯನ್ನು ಮಾಡುವುದರಲ್ಲಿ ವಿಫಲರಾಗಿದ್ದೀರಿ , ಬಡಜನರಿಗೆ ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ವಿಫಲರಾಗಿದ್ದೀರಿ, ನಾವು ಇಂಥ ವಿಚಾರದಲ್ಲಿ ಸಫಲವಾಗಿದ್ದೇವೆಂದು, ಯಾವುದೇ ಒಂದರಲ್ಲಿ ತಾವು ಹೆಮ್ಮೆಯಿಂದ ಹೇಳಿಕೊಳ್ಳಿ. ಆದರೆ ತಮ್ಮ ಹತ್ತಿರ ಯಾವುದೂ ಇಲ್ಲ, ಕೇವಲ ಕಚ್ಚಾಟ, ಜಗಳ ಇನ್‌ಸ್ಟೆಬಿಲಿಟಿ ಇವಷ್ಟೇ ನೀವು ರಾಜ್ಯಕ್ಕೆ ಕೊಟ್ಟ ಕೊಡುಗೆ, ಅದನ್ನು ಮಾತ್ರ ಈ ರಾಜ್ಯಕ್ಕೆ ಕೊಟ್ಟಿರೇ ವಿನಃ ಬೇರೆ ಏನನ್ನೂ ಕೊಡಲಿಲ್ಲ. ಜನರು, ರೈತರು, ಸಾಮಾನ್ಯ ಜನರು ಕಾರ್ಮಿಕರು ಬೆಲೆ ಏರಿಕೆಯ ಭಾರವನ್ನು ತಾಳಲಾರದೆ, ಆ ಶಕ್ತಿಯಿಲ್ಲದೆ ರಾಜ್ಯದಲ್ಲಿ ಅವರುಗಳು ಫ್ರಸ್ಟ್ರೇಟ್ ಆಗಿದ್ದಾರೆ. ನೀವು ಯಾವ ಗ್ರೌಂಡ್‌ನಲ್ಲಿ ಸಾಧನೆ ಮಾಡಿದ್ದೀರಿ ಹೇಳಿ? ಹೌಸಿಂಗ್ ಮಾಡಿದ್ದೀರೋ? ನೀರಾವರಿ ಮಾಡಿದ್ದಿರೋ? ಪವರ್ ಸೆಕ್ಟಾರ್‌ನಲ್ಲಿ ಸಾಧನೆ ಮಾಡಿದ್ದೀರೋ? ಯಾವುದಾದರೂ ಒಂದೇ ಒಂದನ್ನು ಹೇಳಿ ನೋಡೋಣ. But Distribution of sitesನ್ನು ಒಪ್ಪಿಕೊಳ್ಳಬೇಕಾಗುತ್ತದೆ. Yes, Regarding distribution of sites, to some extent you have been successful ಅದನ್ನು ಮೆಚ್ಚಬೇಕಾಗುತ್ತದೆ, ಇದೊಂದನ್ನು ಬಿಟ್ಟರೆ ನೀವು ಏನು ಮಾಡಿದ್ದೀರಿ? ಏನೇನೂ ಮಾಡಿಲ್ಲ, ಹಾಗಾಗಿ ತಾವು ಕೇವಲ ಭಾಷಣದಿಂದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆಂದು ಹೇಳುವುದಾದರೆ ಅದು ಸಾಧ್ಯವಾಗುವುದಿಲ್ಲ, ಮುಖ್ಯಮಂತ್ರಿಗಳು ಹೊಸದಾಗಿ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ. ತಮ್ಮ ಬಜೆಟ್ ಭಾಷಣದಲ್ಲಿ ಹೊಸದಾಗಿ ಯಾವ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ ಎಂದರೆ ಉದ್ಯೋಗ ಜ್ಯೋತಿ ಎನ್ನುವ ಕಾರ್ಯಕ್ರಮ.

Comprehensive Scheme for self employed & unemployed ಇದರಿಂದ ಒಳ್ಳೆಯ ಕೆಲಸವಾಗುತ್ತದೆ ಮಾಡಿ. ಆದರೆ ತಮ್ಮ ಹಿಂದಿನ ದಾಖಲೆಗಳನ್ನು ನೋಡಿದರೆ 4 ಲಕ್ಷ ನಿರುದ್ಯೋಗಿಗಳನ್ನು ತಯಾರು ಮಾಡಿದ್ದೀರಿ, ಈಗ ಉದ್ಯೋಗ ಜ್ಯೋತಿ ಎನ್ನತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಬಂದಿದ್ದಾರೆ. ನನಗೆ I am having my own doubts. ಏಕೆಂದರೆ ಇದಕ್ಕೆ ಸರಿಯಾದ ಬಜೆಟರಿ ಸಪೋರ್ಟ್ ಇಲ್ಲ. ಆದುದರಿಂದ ಈ ಕಾರ್ಯಕ್ರಮ ಸಫಲವಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಅದೇ ಪ್ರಕಾರ Dunkel Proposal ಮಾನ್ಯ ಏಕಾಂತಯ್ಯನವರು ಅದರ ಬಗ್ಗೆ ವಿವರವಾಗಿ ಮಾತನಾಡಬಹುದು, ತಾವು ಇವತ್ತು ಅದರ ಕನ್‌ಸರ್ನ್ ಮಾತ್ರ ಎಕ್ಸ್‌ಪ್ರೆಸ್ ಮಾಡಿದ್ದೀರಿ, ಆದರೆ ಇವತ್ತು ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕುಗಳ ಒತ್ತಾಯಕ್ಕೆ ಮಣಿದು ಭಾರತ ಸರ್ಕಾರದವರು Dunkel Proposal ಒಪ್ಪಿಕೊಳ್ಳಲು ಹೊರಟರೆ it will be a deathnail in your policy. ಇದು ರೈತರ ವಿರೋಧ ನೀತಿ ಇದೆ, ಕೈಗಾರಿಕೆಯ ವಿರೋಧ ನೀತಿ ಇದೆ, ಆದ್ದರಿಂದ ತಾವು ಇದರ ಬಗ್ಗೆ ಬಹಳ ದೀರ್ಘವಾಗಿ ವಿಚಾರ ಮಾಡಬೇಕು. ಮುಖ್ಯಮಂತ್ರಿಗಳು ಇದರ ಬಗ್ಗೆ ನಮ್ಮನ್ನು ಕರೆದು ಮಾತನಾಡುತ್ತೇವೆಂದು ಹೇಳಿದ್ದಾರೆ. ಬರೀ ಕರೆದು ಮಾತನಾಡುವುದು ಬೇಡ. ಶ್ರೀಮಾನ್ ನರಸಿಂಹರಾವ್‌ರವರನ್ನು ಸಂತೋಷ ಪಡಿಸತಕ್ಕ ಪ್ರಶ್ನೆ ಇಲ್ಲಿ ಅಲ್ಲ, ಇದರಲ್ಲಿ ನಾಡಿನ, ರೈತರ ಸಮಸ್ಯೆ ಇದೆ, ಹಾಗೆಯೇ ಇವತ್ತು Multi Nationals seed production ಬಂದರೆ ಏನಾಗುತ್ತದೆ ಎಂದರೆ we will become slaves and we will have to dance to their tunes. ಹಾಗೆಯೇ ನಮ್ಮ ಸ್ವಾತಂತ್ರ್ಯ ನಮ್ಮ ಲಿಬರ್ಟಿಯನ್ನು ಕಳೆದುಕೊಂಡು Dunkel Proposalನ್ನು ಭಾರತ ಸರ್ಕಾರದವರು ಒಪ್ಪಿಕೊಂಡರೆ ಅದು ಬಹಳ ದೊಡ್ಡ ಪಾಪವಾಗುತ್ತದೆ, ಆದ್ದರಿಂದ ಇದರ ಬಗ್ಗೆ ನಾನು ಸೂಚನೆಯನ್ನು ಮಾಡುತ್ತಿದ್ದೇನೆ, ಇದರ ಬಗ್ಗೆ ಹೆಚ್ಚಿನ ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳುತ್ತೇನೆ. ಇನ್ನು ಈ War veteransಗೆ ತಾವು ಏನು ರೇಷನ್‌ನನ್ನು ಕೊಡಬೇಕೆಂದು ಕಾರ್ಯಕ್ರಮ ಮಾಡಿದ್ದೀರಿ ಅದನ್ನು ಸ್ವಾಗತಿಸುತ್ತೇವೆ, ಮತ್ತೆ ತಾವು ಕೊಂಕಣಿ ಮತ್ತು ತುಳು ಭಾಷೆಗಳಿಗೆ ಅಕಾಡಮಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನೂ ಕೂಡ ಸ್ವಾಗತ ಮಾಡುತ್ತೇವೆ. ಆದರೆ ಬರೀ ಅಕಾಡಮಿಯನ್ನು ಸ್ಥಾಪನೆ ಮಾಡುವುದರಿಂದ ಏನೂ ಉಪಯೋಗ ವಾಗುವುದಿಲ್ಲ,ಇದನ್ನೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ, ಆದ್ದರಿಂದ ಅಂಥ ಅಕಾಡಮಿಗಳಿಗೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್‌ನ್ನು ಕೊಡಿ, ಈಗ ಇರತಕ್ಕ ಅಕಾಡಮಿಗಳು ಅದು ಇಲ್ಲದೆ ಸರಿಯಾಗಿ ನಡೆಯುತ್ತಿಲ್ಲ, ಅದಕ್ಕೆ ಬಜೆಟಿನಲ್ಲಿ ಸರಿಯಾಗಿ ಹಣವನ್ನು ಕೊಡಿ ಮತ್ತು ಅದನ್ನು ಕ್ರಿಯಾಶೀಲವನ್ನಾಗಿ ಮಾಡಿ, ತಾವು ಯಾವ ಉದ್ದೇಶಕ್ಕಾಗಿ ಅದನ್ನು ಸ್ಥಾಪನೆ ಮಾಡಿದ್ದೀರೋ ಆ ಉದ್ದೇಶಕ್ಕೆ ಅವುಗಳನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಪ್ರಯತ್ನ ಮಾಡಲಿ. ಎಕ್ಸೈಜ್ ವಿಚಾರದಲ್ಲಿ ನನಗೆ ಸ್ವಲ್ಪ ಕ್ಲಾರಿಫಿಕೇಷನ್‌ನನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾಗಿದೆ. ಏಕೆಂದರೆ ಇಲ್ಲಿ Budget Page 86. License fee for RS/DS prior to 1993 existing rate Rs.50,000/-. ಈಗ ನಿಮ್ಮ ಬಜೆಟ್‌ನಲ್ಲಿ ಇದನ್ನು 250 ರೂ. ಎಂದು ಮಾಡಿದ್ದೀರಿ. ನೀವು ಇಲ್ಲಿ ಕೊಟ್ಟಿರತಕ್ಕ ಫಿಗರ್ಸ್ ಸರಿಯೋ, ತಪ್ಪೋ ನನಗೆ ಗೊತ್ತಿಲ್ಲ. ಆದರೆ ಮೊದಲು 50,000 ರೂ ಫೀಸ್ ಎಂದು ಇತ್ತು. ಅದನ್ನು ನೀವು 250 ರೂಗಳಿಗೆ ಇಳಿಸಿದ್ದೀರಿ. ಅದೇ ರೀತಿ ಡೀ ನೆಚರ್ಡ್ ಸ್ಪಿರಿಟ್ ಲೈಸೆನ್ಸ್ ಡಿ.ಎಲ್. ಫೀ. 10,000 ರೂ. ಇತ್ತು. ಅದನ್ನು ಕೂಡ ನೀವು 250 ರೂ. ಗೆ ಇಳಿಸಿದ್ದೀರಿ. ನಾನಾದರೂ ಕೇಳುತ್ತೇನೆ, ಕೆಲವು ಕಡೆ ಸಿಎಲ್ - 1, ಸಿಎಲ್. - 2, ನ್ನೂ ಕಡಿಮೆ ಮಾಡಿದ್ದೀರಿ. ಇದನ್ನು ನಾನು ಅರ್ಥ ಮಾಡಿ ಕೊಂಡಿದ್ದೇನೆ. 50,000 ರೂ. ಇದ್ದುದನ್ನು ಮತ್ತು 10,000/ ರೂ. ಇದ್ದುದನ್ನು 250 ರೂ.ಗೆ ಏತಕ್ಕೆ ಇಳಿಸಿದಿರಿ? ಇದನ್ನು ನೀವು ಯಾರ ಸಲುವಾಗಿ

ಮಾಡಿದಿರಿ? ಇದರ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳು ನನಗೆ ವಿವರಣೆಯನ್ನು ಕೊಡಬೇಕಾಗುತ್ತದೆ. ಅಲ್ಲದೆ ಈಗ ಇಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳು ಸರಿಯೋ ಅಥವಾ ತಪ್ಪೋ ಎಂಬ ಬಗ್ಗೆ ಕೂಡ ಸದನಕ್ಕೆ ವಿವರಣೆಯನ್ನು ಕೊಡಬೇಕಾಗುತ್ತದೆ.

ಇನ್ನು ರೂರಲ್ ಡೆವಲಪ್‌ಮೆಂಟ್‌ಗೆ ಪ್ರಿಯಾರಿಟಿಯನ್ನು ಕೊಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಇದೇ ರೀತಿ ಮಾನ್ಯ ಮನಮೋಹನ ಸಿಂಗ್‌ರವರೂ ಕೂಡ ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿ ರೂರಲ್ ಡೆವಲಪ್‌ಮೆಂಟ್‌ಗೆ ನನ್ನ ಮುಂಗಡಪತ್ರಗಳಲ್ಲಿ ಆದ್ಯತೆಯನ್ನು ಕೊಟ್ಟಿದ್ದೇನೆಂದು ಹೇಳಿದ್ದಾರೆ. ನಿಮ್ಮ ಸರ್ಕಾರ ಇಲ್ಲಿ 1 ರೂ.ನ್ನು ಖರ್ಚು ಮಾಡಿದರೆ ಇದರಲ್ಲಿ 3.74ನ್ನು ರೂರಲ್ ಡೆವಲಪ್‌ಮೆಂಟ್‌ಗೆ ಕೊಟ್ಟಂತಾಗುತ್ತದೆ, ಅಂದರೆ ರೂರಲ್ ಡೆವಲಪ್‌ಮೆಂಟ್‌ಗೆ ನೀವು ಎಷ್ಟು ಮಹತ್ವವನ್ನು ಕೊಡುತ್ತಿದ್ದೀರೆಂಬುದನ್ನು ಇದರಿಂದಲೇ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಇದೇ ರೀತಿ ಆರೋಗ್ಯಕ್ಕೆ 3.72ನ್ನು ನಿಮ್ಮ ಇಲಾಖೆಯಿಂದ ಕೊಟ್ಟಿದ್ದೀರಿ. ಎಸ್.ಸಿ. , ಎಸ್.ಟಿ ಮತ್ತು ಬ್ಯಾಕ್‌ವರ್ಡ್‌ಕ್ಲಾಸ್ ಜನರ ಕಲ್ಯಾಣಕ್ಕೆ 2.63ನ್ನು ಕೊಟ್ಟಿದ್ದೀರಿ. ಇದೇ ರೀತಿ ಸೋಷಿಯಲ್ ವೆಲ್‌ಫೇರ್ ಮತ್ತು ನ್ಯೂಟ್ರಿಷನ್‌ಗೋಸ್ಕರ 1.47 ಕೊಟ್ಟಿದ್ದೀರಿ. ಇಷ್ಟು ಕಡಿಮೆ ಅಲೋಕೇಷನ್‌ನಿಂದ ಈ ಸಮಾಜದಲ್ಲಿ ಅತಿ ದುರ್ಬಲವರ್ಗದ ಜನರ ಕಲ್ಯಾಣವನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಾಗುತ್ತದೆಯೇ? ಎಸ್.ಸಿ., ಎಸ್.ಟಿ. ಯವರ ಕಲ್ಯಾಣ ಮಾಡುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಹಿಂದುಳಿದವರ್ಗಗಳ ಕಲ್ಯಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರಿಗೆ ನೀವು ಸಾಮಾಜಿಕ ನ್ಯಾಯವನ್ನು ಕೊಡಬೇಕು. ಈ ವರ್ಗದ ಜನರಿಗೆ ಸಾಕಷ್ಟು ಉತ್ತೇಜನವನ್ನು ಕೊಡಬೇಕಾಗುತ್ತದೆ. ಈ ವರ್ಗಗಳ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ನೀವು ಖರ್ಚು ಮಾಡಬೇಕಾಗುತ್ತದೆ. ಕ್ಯಾಬಿನೆಟ್‌ನಲ್ಲಿ ಪರಿಶಿಷ್ಟ ಜಾತಿ ಜನಾಂಗದ ಮಂತ್ರಿಗಳು ಹೆಚ್ಚಾದರೆ, ಹಿಂದುಳಿದ ವರ್ಗಗಳ ಜನಾಂಗದ ಮಂತ್ರಿಗಳು ಹೆಚ್ಚಾದರೆ, ಆ ಜನಾಂಗದ ಕಲ್ಯಾಣವಾಗುವುದಿಲ್ಲ. ಯಾವ ಜಾತಿಯ ಮುಖ್ಯಮಂತ್ರಿಗಳು ಬರುತ್ತಾರೆ ಅವರ ಜಾತಿಯ ಜನರ ಕಲ್ಯಾಣ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ನಿಜವಾಗಿಯೂ ಹಿಂದುಳಿದ ವರ್ಗಗಳ ಬಗ್ಗೆ ಎಸ್.ಸಿ, ಎಸ್.ಟಿ.ಗಳ ಬಗ್ಗೆ ಕಮಿಟ್‌ಮೆಂಟ್ಸ್ ಇದ್ದಿದ್ದರೆ ಆ ವಿಚಾರವನ್ನು ನಿಮ್ಮ ಈ ಬಜೆಟ್‌ನಲ್ಲಿ ಹೇಳಬೇಕಾಗಿತ್ತು. ಈ ನಿಮ್ಮ ಬಜೆಟ್‌ನಲ್ಲಿ ನಮಗೆ ಏನೂ ಕಾಣಿಸುತ್ತಿಲ್ಲ. ಇದರಲ್ಲಿ ಯಾವುದೇಕಮಿಟ್‌ಮೆಂಟೂ ಇಲ್ಲ. ತಾವು ಇವತ್ತು ಕೆಲವು ಅನವಶ್ಯಕ ಟ್ಯಾಕ್ಸನ್ನು ಹಾಕಿದ್ದೀರಿ. ಈ ಟ್ಯಾಕ್ಸ್‌ನ್ನು ಹಾಕುವ ಅವಶ್ಯಕತೆ ಇರಲಿಲ್ಲ. ಈಗಾಗಲೇ ನಾನು ಇದನ್ನು ಹೇಳಿದ್ದೇನೆ.

ಇನ್ನು ವಾಷಿಂಗ್ ಸೋಪಿಗೆ 8 ಪರ್ಸೆಂಟ್ ಇದ್ದುದನ್ನು 10 ಪರ್ಸೆಂಟ್ ಮಾಡಿದ್ದೀರಿ. ಇದು ಸಾಮಾನ್ಯ ಜನರು ಉಪಯೋಗಿಸುವಂಥಾದ್ದು. ಮಾನ್ಯ ಮನಮೋಹನಸಿಂಗ್‌ರವರು ಟ್ಯಾಕ್ಸ್ ಫ್ರೀ ಬಜೆಟ್‌ನ್ನು ಕೊಟ್ಟರು. ಇಲ್ಲಿ ಕೆಲವು ರಿಸರ್ವೇಷನ್ ಬಜೆಟ್ ಬಗ್ಗೆ ಇದೆ. ಡಿಫಿಸಿಟನ್ನು 4500 ಕೋಟಿ ರೂ.ಗೆ ತರುತ್ತೇನೆಂದು ಹೇಳಿದರು. ಆದರೆ ಇಲ್ಲಿ ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ನಾಡಿನ ಜನರ ಮೇಲೆ ಟ್ಯಾಕ್ಸ್‌ನ್ನು ಹಾಕಿದ್ದಾರೆ. ಇದರಲ್ಲಿ ಬಡವರಿಗೆ ಅನುಕೂಲವಾಗುವಂಥಾದ್ದು ಏನೂ ಇಲ್ಲ, ಸಾಮಾನ್ಯ ಜನರಿಗೆ ಅನುಕೂಲವಾಗುವಂಥಾದ್ದೂ ಏನೂ ಇಲ್ಲ. ಅಷ್ಟೇ ಅಲ್ಲ ರೈತರಿಗೂ ಕೂಡ ಏನೂ ಇಲ್ಲ. ಇವತ್ತು ಪ್ಲಾಸ್ಟಿಕ್ ಪೈಪ್ಸ್ ಮತ್ತು ಫಿಟಿಂಗ್ಸ್‌ನ್ನು ಇರಿಗೇಷನ್‌ನಲ್ಲಿ ಉಪಯೋಗಿಸುವಂಥಾದ್ದು. ಇದಕ್ಕೆ 3 ಪರ್ಸೆಂಟ್ ಇದ್ದುದನ್ನು 6 ಪರ್ಸೆಂಟ್ ಎಂದು ಮಾಡಿದ್ದಾರೆ. ಈ ಭಾರ ರೈತನ ಮೇಲೆ ಏತಕ್ಕೆ? ರೈತ ಏನು ಪಾಪ ಮಾಡಿದ್ದಾನೆ? 3ರಿಂದ 6 ಪರ್ಸೆಂಟ್ ಏರಿಸುವಂಥ ಅವಶ್ಯಕತೆಯಾದರೂ ಏನಿತ್ತು? ಇದೇ ರೀತಿ ಅಲ್ಯೂಮಿನಿಯಂ ಬಗ್ಗೆ ವೀಟ್ ಪ್ರಾಡಕ್ಟ್ಸ್ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಹಿಂದೆ ಇದ್ದ ರೀತಿಯಲ್ಲಿ ಅಲ್ಯೂಮಿನಿಯಂ ಮತ್ತು

ವೀಟ್ ಪ್ರಾಡಕ್ಟ್‌ಗೆ ಟ್ಯಾಕ್ಸ್ ಎಕ್ಸೆಂಪ್‌ಷನ್ ಕೊಡಬೇಕು. ವಾಷಿಂಗ್ ಸೋಪ್ಸ್, ಪ್ಲಾಸ್ಟಿಕ್ ಫಿಟಿಂಗ್ಸ್ ಮೇಲೆ ಏನು ಟ್ಯಾಕ್ಸನ್ನು ಹೆಚ್ಚು ಮಾಡಿದ್ದೀರಿ ಅದನ್ನೆಲ್ಲಾ ಸಂಪೂರ್ಣ ವಿತ್‌ಡ್ರಾ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಈ ಮುಂಗಡಪತ್ರದಲ್ಲಿ ರೈತರಿಗೆ ಯಾವುದೇ ಅನುಕೂಲವೂ ಇಲ್ಲ. ಬಡವರಿಗೆ, ಜನಸಾಮಾನ್ಯರಿಗೆ ಅಷ್ಟೇ ಅಲ್ಲ ರಾಜ್ಯದ ಅಭಿವೃದ್ಧಿಗೂ ಕೂಡ ಏನೇನೂ ಇಲ್ಲ. ಇದು ಒಂದು ಆಂಬೀಷಿಯಸ್ ಬಜೆಟ್ ಆಗಿದೆ. ಮಾನ್ಯ ಮುಖ್ಯ ಮಂತ್ರಿಯವರು ನಾಡಿನ ಜನರಿಗೆ ಚಂದ್ರನನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇವರು ಚಂದ್ರನವರೆಗೆ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಬಹಳ ಕಷ್ಟವಿದೆ. ಏಕೆಂದರೆ ಡಿಫಿಸಿಟನ್ನು ಏನು ಫೋಕಸ್ ಮಾಡಿದ್ದಾರೆ ಅದನ್ನು ಸರಿಯಾಗಿ ಮಾಡಿಲ್ಲ. ಕೆಲವು ಸ್ಕೀಂಗಳಿಗೆ ಬಜೆಟ್ ಸಪೋರ್ಟನ್ನು ಏನು ಕೊಟ್ಟಿದ್ದಾರೆ ಅದನ್ನು ಸರಿಯಾಗಿ ಕೊಟ್ಟಿಲ್ಲ. ಅದುದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಪುನರ್ ಪರಿಶೀಲಿಸಬೇಕಾಗುತ್ತದೆ. ಇವತ್ತು ಸಣ್ಣ ಸಣ್ಣ ಟ್ರೇಡರ್ಸ್‌ಗೆ ಮಾನ್ಯ ಬಂಗಾರಪ್ಪನವರು ಇದ್ದಾಗ ಬಡವರಿಗೆ ಕಷ್ಟ ಆಗಬಾರದೆಂಬ ಉದ್ದೇಶದಿಂದ 2 ಲಕ್ಷ ರೂ.ವರಿಗೆ ಎಕ್ಸೆಂಪ್ಷನ್ ಕೊಟ್ಟಿದ್ದರು. You have brought them under net ಈ ವ್ಯಾಪಾರದವರನ್ನು ಬಿಟ್ಟರೆ upto two lakhs you have brought, ಬಂಗಾರಪ್ಪನವರು ಆದೇಶ ಮಾಡಿದ್ದರು. ಅದನ್ನು ರೆಸ್ಟೋರ್ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಸಾಮಾನ್ಯ ಜನ ಸಣ್ಣ ಎರಡು ಲಕ್ಷ ಬಂಡವಾಳ ಹೂಡಿರುವವರು ಏನು ಮಾಡುವುದಕ್ಕಾಗುತ್ತದೆ. ಈಗ ಹೋಟೆಲ್ ನಡೆಸುವವರು ಇವರನ್ನು ಇನ್‌ಕ್ಲೂಡ್ ಮಾಡಿದ್ದಾರೆಯೇ ನೋಡಿ. ಅದೂ ಸಹ ರೆಸ್ಟೋರ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಅವರು ಮುಖ್ಯಮಂತ್ರಿಯಾಗಿ ಕೇವಲ 3-4 ತಿಂಗಳಾಗಿದೆ, ನೇರವಾಗಿ ಅವರ ಮೇಲೆ ಟೀಕೆಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಅವರಿಗೂ ಆಪರ್‌ಚುನಿಟಿ ನಾವು ಕೊಡಬೇಕಾಗುತ್ತದೆ. ಸ್ವಾಭಾವಿಕವಾಗಿ ನಾವು ಕೊಡುತ್ತೇವೆ, ಆದರೆ ಪ್ರಾಕ್ಟಿಕಲ್ ಆಗಿ ಪ್ರಾಮಾಣಿಕವಾಗಿ ತಾವು ಏನು ಮಾತನಾಡುತ್ತೀರಿ ಆ ಪ್ರಕಾರವಾಗಿ ನಡೆದುಕೊಳ್ಳಿ. ಕಮಿಟ್‌ಮೆಂಟ್ ಇರಬೇಕಾಗುತ್ತದೆ. ಕೇವಲ ರೋಸಿ ಪಿಕ್ಚರ್ ಕೊಟ್ಟು ಜನರನ್ನು ಮೋಸಮಾಡಲಿಕ್ಕೆ ಆಗುವುದಿಲ್ಲ. ಒಂದು ಸಾರಿ ಫೂಲ್ ಮಾಡಬಹುದು. All time nobody will be fooled. ಕಳೆದ ನಾಲ್ಕು ವರ್ಷಗಳಿಂದ ನಿಮ್ಮ ಮುಂಗಡ ಪತ್ರದಿಂದ ನಾಡಿನಲ್ಲಿ ಏನೂ ಅಭಿವೃದ್ಧಿಯಾಗಿಲ್ಲ. ಎಲ್ಲಾ ಸೆಕ್ಟರ್‌ನಲ್ಲಿ ಫೇಲ್ ಆಗಿದ್ದೀರಿ. ಅದು ಇರಿಗೇಷನ್ ಇರಬಹುದು, ಪವರ್ ಇರಬಹುದು, ಅದು ಕೃಷಿ ಇರಬಹುದು. ನಿಮಗೆ ಇನ್ನೂ ಅವಕಾಶ ಇದೆ., ನಾವು ನಿಮಗೆ ವಾರ್ನಿಂಗ್ ಕೊಡುತ್ತಿದ್ದೇವೆ. ಇನ್ನೂ ಒಂದೂವರೆ ವರ್ಷ ಇದೆ. ತಾವು ಪುನಃ ಇಲ್ಲಿಗೆ ಬರಬೇಕೆಂಬ ಇಚ್ಛೆ ಇದ್ದರೆ ಸ್ವಲ್ಪ ಜನರ ಜೊತೆಯಲ್ಲಿ ಸ್ಪಂದಿಸುವುದಕ್ಕೆ ಪ್ರಯತ್ನ ಮಾಡಿ. ಸಾಮಾನ್ಯ ಜನತೆಯೊಂದಿಗೆ ಸ್ಪಂದಿಸುವುದಕ್ಕೆ ಪ್ರಯತ್ನ ಮಾಡಿರಿ. ಜಗಳ ಸ್ವಲ್ಪ ಕಡಿಮೆ ಮಾಡಿ. ಜಗಳ ಕಡಿಮೆ ಮಾಡಿ ರಾಜ್ಯದ ಅಭಿವೃದ್ಧಿಯ ಬಗ್ಗೆ, ರಾಜ್ಯದ ರೈತರ ಬಗ್ಗೆ, ರಾಜ್ಯದ ಬಡವರ ಬಗ್ಗೆ , ಪರಿಶಿಷ್ಟ ಜಾತಿ ಜನರ ಬಗ್ಗೆ, ಸ್ವಲ್ಪ ಚಿಂತನೆ ಮಾಡಿ. ಅಂದರೆ ಏನಾದರೂ ರಿಸಲ್ಟ್ ಟ್ಯಾನ್ಜಿಬಲ್ ಆಗಿ ಬರಲಿಕ್ಕೆ ಸಾಧ್ಯವಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಮುಂಗಡ ಪತ್ರದಲ್ಲಿ ತಾವು ಏನೇನು ಹೇಳಿದಿರಿ, ಇದರಲ್ಲಿ 10 ಪರ್ಸೆಂಟ್ ಪ್ರಾಮಿಸ್ಸನ್ನು ಕಮಿಟ್ ಮಾಡಲಿಕ್ಕೆ ಆಗಲಿಲ್ಲ. ತಾವು ಏನು ಮಾಡಿದ್ದೀರಿ ಎಂಬುದಕ್ಕೆ ತಾವೇ ಉತ್ತರ ಕೊಡ ಬೇಕಾಗುತ್ತದೆ. ಇನ್ನು ಸಾಕಷ್ಟು ವಿಚಾರಗಳು ಇವೆ. ಸಮಯದ ಅಭಾವವು ಇದೆ. ತಾವು ಟೈಮ್ ಫಿಕ್ಸ್ ಮಾಡಿದ್ದೀರಿ. ಆದ್ದರಿಂದ ಇನ್ನು ಹೆಚ್ಚು ಸಮಯ ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಒಂದು ಆಂಭಿಷಿಯಸ್ ಪ್ರೋಗ್ರಾಮ್ ಇಟ್ಟಿದ್ದಾರೆ. ಅದು ಏನೆಂದರೆ ಅನ್ಯೂಯಲ್ ಪ್ಲಾನ್ ನಿಮ್ಮದು 3,035 ಕ್ರೋರ್ಸ್ ಇದೆ. ನಿಮ್ಮ ಅನ್ಯುಯಲ್ ಪ್ಲಾನ್ 1992-93ಕ್ಕೆ ಒರಿಜನಲ್ ಪ್ಲಾನ್ ಕೂಡ 1913 ಕೋಟಿ ರೂಪಾಯಿ ಇತ್ತು. ಅದರಂತೆ ಸಬ್‌ಸೀಕ್ವೆಂಟ್‌ಲಿ ಅದು ಇನ್‌ಕ್ರೀಸ್ ಆದುದು 2,200

ಕೋಟಿಗೆ. 1993-94ಕ್ಕೆ ನಿಮ್ಮ ಅನ್ನುಯಲ್ ಪ್ಲಾನಿಂಗ್ 3,025 ಕೋಟಿ, ನೀವು ಮುಂಗಡ ಪತ್ರದಲ್ಲಿ Therefore it is false. It is not a correct statement. ಏನು ಹೇಳಿದಿರಿ. 57 ಪರ್ಸೆಂಟ್ ಇನ್‌ಕ್ರೀಸ್ ಕಳೆದ ವರ್ಷ ಎಂದು ಹೇಳಿದಿರಿ. ಏತಕ್ಕೆಂದರೆ ಮಾನ್ಯ ಬಂಗಾರಪ್ಪನವರು ಮುಂಚೆ 1,918 ಆಕ್ಚುಯಲ್ ಪ್ಲಾನ್ ಅಪ್ರೂವಲ್ ಎಂದು ಬರೆಸಬಹುದು. ಆದರೆ ರಿವೈಸ್ಡ್ ಪ್ಲಾನ್, ಆದ್ದರಿಂದ Your contention that 57% increase in the budget is not correct. 57 ಪರ್ಸೆಂಟ್ ಇನ್‌ಕ್ರೀಸ್ ಇದೆ ಎಂದು ತಾವು ಹೇಳಿದಿರಿ. ಇದು ಸರಿಯಲ್ಲ, ಸತ್ಯಕ್ಕೆ ದೂರವಾದುದು. ದಯಮಾಡಿ ತಾವು ಸದನಕ್ಕೆ ದಾರಿತಪ್ಪಿಸಬಾರದು ಇಷ್ಟು ಹೇಳಿ Hon. Finance Minister ಅವರು ಬಹಳ ಆಂಬಿಷಿಯಸ್ ಪ್ರೋಗ್ರಾಂ ಇಟ್ಟಿದ್ದಾರೆ. ರಿಸೋರ್ಸಸ್ ಇಲ್ಲ, ರಿಸೋರ್ಸಸ್ ಮೊಬಲೈಸ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು ಈಗಾಗಲೇ ಹೇಳಿದಂತೆ, ಡಿಫಿಸಿಟ್ 96 ಕೋಟಿ, It will be to the time of Rs. 750 crores. The Finances are going to mess. ಒಂದು ಕಾಲ ಬರಬಹುದು. ತಾವೇ ಹೇಳಿ. ಓವರ್ ಕಮ್ ಮಾಡಬೇಕಾದರೆ ರಿಯಾಲೆಸ್ಟಿಕ್ ಆಗಿರಬೇಕು. ನಾನು ಹೇಳುತ್ತೇನೆ ಬಜೆಟ್‌ನಲ್ಲಿ ಯಾವುದೇ ಸ್ಕೀಮ್ ತೆಗೆದುಕೊಳ್ಳಿ. be realistic be pragmatic. 10 ಸ್ಕೀಮ್ ಮಾಡುವ ಬದಲು 2 ತೆಗೆದುಕೊಳ್ಳಿ, ಮೂರು ತೆಗೆದುಕೊಳ್ಳಿ, But give sufficient budgetary support.

ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಸುಧಾರಣೆ ಮಾಡಬೇಕಾಗುತ್ತದೆ. ಅದನ್ನು ಡೀಸೆಂಟ್ರಲೈಸೇಷನ್‌ಗೆ ತರ ಬೇಕಾಗುತ್ತದೆ. ಅಲ್ಲಿ ಕರಪ್ಷನ್ ಸಾಕಷ್ಟು ಬೆಳೆದಿದೆ. ಅದು ಕಡಿಮೆ ಆಗಬೇಕು. ಒಂದೇ ಜಾಗದಲ್ಲಿ 5-6-8 ವರ್ಷಗಳಿಂದ ಅಧಿಕಾರಿಗಳು ಇದ್ದಾರೆ. ಅವರು ಚೇಂಜ್ ಆಗಬೇಕಾಗುತ್ತದೆ. ಬೆಂಗಳೂರು ಬಿಟ್ಟು ಬೆಳಗಾಂಗೆ ಹೋಗಬೇಕಾಗುತ್ತದೆ, ಗುಲ್ಬರ್ಗಾಕ್ಕೆ ಹೋಗಬೇಕಾಗುತ್ತದೆ. ಆ ವ್ಯವಸ್ಥೆ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಆಗಬೇಕು. ಮತ್ತೊಂದು ನನಗೆ ಆಶ್ಚರ್ಯವಾದುದು, ಮುಖ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ನಮ್ಮ ಕಾಲದಲ್ಲೂ ನೋಡಿದ್ದೇವೆ Commissioner, Commercial Taxes, fixes the target. ಒಂಧೂವರೆ ಕೋಟಿ ರೂಪಾಯಿ ಟಾರ್ಗೆಟ್ 1991-92ಕ್ಕೆ.

ಮುಂದಿನ ವರ್ಷಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳು. ಇದು ಹೇಗೆ ಸಾಧ್ಯವಿದೆ? ಇದರ ಬಗ್ಗೆ ಯಾರಾದರೂ ಚಿಂತನೆ ಮಾಡಿದ್ದೀರಾ? ಈ ಪ್ರಕಾರ ಯಾವ ಟಾರ್ಗೆಟ್ ಫಿಕ್ಸ್ ಮಾಡುತ್ತೀರಿ ಅದು ಹೇಗೆ ರೀಚ್ ಆಗಲಿಕ್ಕೆ ಸಾಧ್ಯವಿದೆ? ಪ್ರತಿ ವರ್ಷ ಟಾರ್ಗೆಟ್ ಹೆಚ್ಚಾಗಬೇಕಾಗದರೆ ಕಾಮರ್ಸ್, ಟ್ರೇಡ್ ಇಂಡಸ್ಟ್ರೀಸ್ ಹೆಚ್ಚಾಗುತ್ತಾ ಇದ್ದಂತೆ ಪರ್ಸೆಂಟೇಜ್ ಕೂಡ ಹೆಚ್ಚಾಗಬೇಕು. ಟ್ಯಾಕ್ಸ್ ಕಲೆಕ್ಷನ್ ಹೆಚ್ಚಾಗಬೇಕು. ಪ್ರತಿ ವರ್ಷ ಟ್ಯಾಕ್ಸ್ ಹೆಚ್ಚಾಗಬೇಕಾಗುತ್ತದೆ. ಇನ್‌ಪ್ಲೇಷನ್ ಇದೆ. ಅದರ ಜೊತೆಗೆ ನ್ಯಾಚುರಲ್ ಗ್ರೋತ್ ಇದೆ. Industries, Commerce-Trade to that extent, I can understand. But if you give a target of 2500 crores, how to achieve it? ಏಕೆಂದರೆ ಅಲ್ಲಿ ಲೂಪ್‌ಹೋಲ್ಸ್ ಇವೆ. ಕರಪ್ಷನ್ ಇದೆ. ಇವತ್ತು ಟೈಟನ್‌ಸ್ ಕಮರ್ಷಿಯಲ್ ಡಿಪಾರ್ಟ್‌ಮೆಂಟಿನಲ್ಲಿ ಜಾರಿಗೆ ತರಬೇಕಾಗಿದೆ. ಎಕ್ಸೈಜ್‌ನಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದು ಎಷ್ಟು ಪ್ರಮಾಣದಲ್ಲಿ ಸಕ್ಸಸ್ ಆಗುತ್ತಿದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಎಕ್ಸೈಜ್ ಲಾಬಿ ಇಲ್ಲದೆ ನಡೆಯುವುದಿಲ್ಲವೆಂದು ಗುಂಡೂರಾಯರು ಹೇಳಿದ್ದಾರೆ. ಕಳೆದ 15-20 ವರ್ಷಗಳಿಂದ ಅವರು ನಮಗೆ ನಮ್ಮ ಕಾಂಗ್ರೆಸ್ ಪಾರ್ಟಿಗೆ

ಸಪೋರ್ಟ್ ಮಾಡುತ್ತಾ ಬಂದಿದ್ದಾರೆ. ಅವರು ಬಿಟ್ಟರೆ ನಾವು ಎಲ್ಲಿ ಹೋಗಬೇಕೆಂದು ಹೇಳಿದ್ದಾರೆ. ಹಾಗಾಗಿ ಆ ವಿಚಾರದಲ್ಲಿ ಮುಖ್ಯಮಂತ್ರಿಗಳು ಆ ಮಾತು ಒಪ್ಪಿಕೊಂಡರೆ....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ಅಭಿಪ್ರಾಯ ನಮ್ಮ ಸರ್ಕಾರದ್ದು ಅಲ್ಲ ನಮ್ಮ ಪಕ್ಷದ್ದು ಅಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಗುಂಡೂರಾಯರು ನಿಮ್ಮ ಪಕ್ಷದವರು ಅಲ್ಲವೇ? ಅವರು ನಿಮ್ಮ ಸೀನಿಯರ್ ಲೀಡರ್?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪ್ರತಿಯೊಬ್ಬರಿಗೂ ವೈಯಕ್ತಿಕ ಅಭಿಪ್ರಾಯಗಳು ಕೆಲವು ಇರುತ್ತವೆ. ಆದರೆ ಅದು ಪಕ್ಷದ ಅಭಿಪ್ರಾಯ ಅಲ್ಲ, ಸರ್ಕಾರದ ಅಭಿಪ್ರಾಯ ಅಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಗುಂಡೂರಾಯರು ಯಜಮಾನರು, ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ವರ್ಕಿಂಗ್ ಕಮಿಟಿ ಮೆಂಬರ್, ಪ್ಲಾನಿಂಗ್ ಬೋರ್ಡ್ ಮೆಂಬರ್, ಗುಂಡೂರಾಯರ ಮಾತಿಗೆ ಬೆಲೆ ಇಲ್ಲ ಅಂದರೆ ಸಸ್ಪೆಂಡ್ ಮಾಡಿ ಎಂದು ಹೇಳುತ್ತೀರಾ? ಆ ಧೈರ್ಯ ನಿಮಗೆ ಇಲ್ಲ, ಕೌಂಟರ್ ಮಾಡುವ ಶಕ್ತಿ ನಿಮಗೆ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಎಲ್ಲಾ ಸರಿ, ಆದರೆ ನಮ್ಮ ವೈಯಕ್ತಿಕ ಅಭಿಪ್ರಾಯಕ್ಕೂ ಪಕ್ಷದ ಅಭಿಪ್ರಾಯಕ್ಕೂ ಸಮಕ್ಷ ಅಭಿಪ್ರಾಯಕ್ಕೂ ವ್ಯತ್ಯಾಸ ಇರುತ್ತದೆ. ಸಮಕ್ಷ ಅಭಿಪ್ರಾಯದಲ್ಲಿ ಆ ಮಾತು ಒಪ್ಪಿಗೆಯಾಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಗುಂಡೂರಾಯರು ಅನುಭವದ ಮಾತು ಹೇಳಿದ್ದಾರೆ. ನಿಮಗೂ ಆ ಅನುಭವ ಇಲ್ಲ. ಅವರು ಅನುಭವದ ಮಾತು ಹೇಳಿದ್ದಾರೆ. ಆ ಅನುಭವದ ಮಾತಿನ ಪರಿಣಾಮ ಶ್ರೀ ವೀರಪ್ಪಮೊಯಿಲಿಯವರ ಮೇಲೆ ಏನಾಗುತ್ತದೆಂದು ನಾವು ನೋಡಬೇಕಾಗುತ್ತದೆ.

ಡಾ. ವೈ. ನಾಗಪ್ಪ : ಗುಂಡೂರಾಯರ ಬಗ್ಗೆ ಹೇಳುತ್ತಿದ್ದೀರಲ್ಲ, ಜೆ. ಹೆಚ್. ಪಟೇಲರು ಮತ್ತು ಹೆಗಡೆಯವರು ಬೇರೆ ಬೇರೆ ಅಲ್ಲವಲ್ಲ, ನಿಮ್ಮ ಪಕ್ಷದವರಲ್ಲವೆ? ಅದಕ್ಕೆ ಹೇಳಿದೆ ಪಕ್ಷದಲ್ಲಿ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ ಎಂದು.

ಶ್ರೀ ಆರ್. ವಿ. ದೇಶಪಾಂಡೆ : ಶ್ರೀ ಜೆ.ಹೆಚ್. ಪಟೇಲರು ನಮ್ಮ ಪಕ್ಷದ ಅಧ್ಯಕ್ಷರು, ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ನಾಯಕರು. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ನಾವು ಹೇಳಿಲ್ಲ, ಎಕ್ಸೈಜ್ ಲಾಭಯಿಂದ ನಡೆಸುತ್ತಾರೆಂದು. ಶ್ರೀ ಗುಂಡೂರಾಯರು ಹೇಳಿದ್ದು ಸತ್ಯ ಇರಬಹುದು, ಅವರ ಅನುಭವದ ಮಾತು ಇರಬಹುದು. ಅವರು ಶ್ರೀ ವೀರಪ್ಪ ಮೊಯಲಿಯವರಿಗೆ ಸರಿಯಾಗಿ ಒಳ್ಳೆಯದನ್ನು ಹಾರೈಸುತ್ತೇನೆ. ನನಗೆ ಭಯ ಇದೆ. ಇದು ಆಂಬಿಷಿಯಸ್ ಪ್ರೋಗ್ರಾಂ ಇದೆ, ಟಾರ್ಗೆಟ್ ರೀಚ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ, ಆ ಶಕ್ತಿ ತಮಗೆ ಕೊಡಲಿ, ನಾಡಿಗೆ ಒಳ್ಳೆಯದಾಗಲಿ, ರಾಜ್ಯದ ರೈತರಿಗೆ ಒಳ್ಳೆಯದಾಗಲಿ, ಬಡವರಿಗೆ ಒಳ್ಳೆಯದಾಗಲಿ, ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದರ ಉಪಯೋಗ ರೈತರಿಗೆ ಆಗಲಿ. ಮುಂದಿನ ವರ್ಷ ಚರ್ಚೆಗೆ ಬಂದಾಗ ತಾವು ಇಂಪ್ಲಿಮೆಂಟ್ ಮಾಡಿದ್ದರೆ First I will start with Compliment and that. But I Know there are dedicated people,

The Finance Commissioner is there. ಹಾಗಾಗಿ ಡೆಡಿಕೇಟೆಡ್ ಜನರು ಬಂದಿದ್ದಾರೆ. ಡೆಡಿಕೇಟೆಡ್ ಜನರಿಗೆ ಅವಕಾಶ ಕೊಡಬೇಕಾಗುತ್ತದೆ. ಟೈಟ್‌ನೆಸ್ ಮಾಡಿದರೆ ಆಗುವುದಿಲ್ಲ. ಫ್ರೀ ಹ್ಯಾಂಡ್ ಕೊಡಿ. ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಅಧಿಕಾರಿಗಳಿಗೆ mercilessly, ತೀರ್ಮಾನ ಮಾಡುವುದಕ್ಕೆ ಅವಕಾಶ ಕೊಡಿ. ಹಾಗೆ ಮಾಡಿದರೆ ಇದು ಸಾಧ್ಯ ಇದೆ . ಆ ಪ್ರಕಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಅವರು ಈಗ ಇಲ್ಲಿ ಇಲ್ಲ. ಪುನಃ ನಾನು ಹೇಳುತ್ತಿದ್ದೇನೆ, ಸಿಂಪ್ಲಿಫಿಕೇಷನ್ ಆಫ್ ಟ್ಯಾಕ್ಸೇಷನ್, ರ್‍ಯಾಷನಲೈಸೇಷನ್ ಆಫ್ ಟ್ಯಾಕ್ಸೇಷನ್ ಬಗ್ಗೆ ಕಾರ್ಯಕ್ರಮ ತಾವು ಹಾಕಿ. ಎಲ್ಲಾ ಟ್ರೇಡ್‌ಗಳು ಇವತ್ತು ಬೇರೆ ರಾಜ್ಯಕ್ಕೆ ಹೋಗುತ್ತಿವೆ. ಇಂಡಸ್ಟ್ರೀಸ್ ಬೇರೆ ರಾಜ್ಯಕ್ಕೆ ಹೊಗುತ್ತಿವೆ. ಇದನ್ನು ಗಮನದಲ್ಲಿ ಇಟ್ಟು ಕಾರ್ಯಕ್ರಮ ಹಾಕಬೇಕು. ಇಷ್ಟು ಹೇಳಿ ಇನ್ನೂ ವಿಷಯಗಳು ಇದ್ದರೂ ಸಮಯದ ಅಭಾವದಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಡಾ : ಎನ್. ಬಿ. ನಂಜಪ್ಪ : (ಶ್ರವಣಬೆಳಗೊಳ) ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ 1993-94ರ ಆಯವ್ಯಯದ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಕರ್ನಾಟಕ ರಾಜ್ಯದ 1993-94ನೇ ಸಾಲಿನ ಆಯವ್ಯಯದ ಎಲ್ಲಾದಾಖಲೆಗಳು ನಮ್ಮ ಮುಂದೆ ಇದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡಿ, ಅವರು ಮಾಹಿತಿ ಸಂಗ್ರಹ ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ನಾವು ಮಾತನಾಡತಕ್ಕ ಸಂದರ್ಭದಲ್ಲಿ ನಾವು ಎಲ್ಲಿದ್ದೇವೆ, ಎಲ್ಲಿಗೆ ಬಂದಿದ್ದೇವೆ, ಹಣಕಾಸಿನ ವ್ಯವಸ್ಥೆಯನ್ನು ಮಾಡತಕ್ಕ ಸಮಯದಲ್ಲಿ ಈ ಹಣ ಎಲ್ಲಿಂದ ಬರುತ್ತದೆ, ಯಾರಿಂದ ಬರುತ್ತದೆ, ಹೇಗೆ ಇದರ ವಿನಿಮಯ ಆಗಬೇಕೆನ್ನುವ ಬಗ್ಗೆ ಎಲ್ಲರೂ ಯೋಚನೆ ಮಾಡಬೇಕು. ಕ್ರಿಟಿಸೈಸ್ ಮಾಡತಕ್ಕದ್ದು ಅಥವಾ ಇಂತಹ ಒಂದು ಭಾಗಕ್ಕೆ 2 ರೂಪಾಯಿ ಕೊಟ್ಟಿದ್ದೀರಿ, ಇನ್ನೊಂದು ಭಾಗಕ್ಕೆ ಒಂದೂವರೆ ರೂಪಾಯಿ ಕೊಟ್ಟಿದ್ದೀರಿ ಎಂದು ಹೇಳುವುದು ಸಹಜ. ಆದರೆ ಮೂಲಭೂತವಾಗಿ ಈ ಹಣವನ್ನು ಖರ್ಚು ಮಾಡತಕ್ಕ ಸಂದರ್ಭದಲ್ಲಿ ದೇಶದ ಆಗುಹೋಗುಗಳನ್ನು ನೋಡಿಕೊಳ್ಳತಕ್ಕ ಸಂದರ್ಭದಲ್ಲಿ ನಾವು ನಮ್ಮ ಆದಾಯ ಏನು, ಆದಾಯದಲ್ಲಿ ಯಾವ ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕೆನ್ನುವುದನ್ನು ಯೋಚನೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಆದರೆ ನನಗನ್ನಿಸುತ್ತದೆ, ಈಗ ಮೂರು ವರ್ಷಗಳ ಹಿಂದೆ ನಾವು ಪ್ರಥಮವಾಗಿ ಇಲ್ಲಿ ಬಂದು ಪ್ರಮಾಣವಚನ ಸ್ವೀಕಾರ ಮಾಡಿದ ದಿವಸ ಈ ರಾಜ್ಯದ ಹಣಕಾಸಿನ ಸ್ಥಿತಿ ಏನಿತ್ತು, ನಮ್ಮ ಕರ್ನಾಟಕ ರಾಜ್ಯದಲ್ಲಿ ಏನೇನು ಆಗಿತ್ತು? ನನಗೆ ಗೊತ್ತಿರುವ ಹಾಗೆ 1150 ಕೋಟಿ ರೂಪಾಯಿ ಸಾಲ ಅವತ್ತು ನಮ್ಮ ಮೇಲೆ ಇತ್ತು. ಈ 1150 ಕೋಟಿ ರೂಪಾಯಿ ಯಾವುದು? ಸಂಬಳವನ್ನು ಕೊಡತಕ್ಕ ಹಣ, ಕಂಟ್ರಾಕ್ಟರುಗಳಿಗೆ ಬಿಲ್ ಕೊಡತಕ್ಕ ಹಣ, ಎಲೆಕ್ಟ್ರಿಕ್ ಬಿಲ್ ಕೊಡತಕ್ಕ ಹಣ, 1150 ಕೋಟಿ ರೂಪಾಯಿ ಸಾಲವನ್ನು ಮೂರು ವರ್ಷಗಳ ಹಿಂದೆ ನಮ್ಮ ರಾಜ್ಯ ಸರ್ಕಾರಕ್ಕೆ ಬಿಟ್ಟು ಈಗ ಭಾಷಣ ಮಾಡಿದ ನಮ್ಮ ವಿರೋಧ ಪಕ್ಷದ ನಾಯಕರು ಏನಿದ್ದಾರೆ ಅವರ ಪಕ್ಷ ಅವತ್ತು ಪಲಾಯನ ಮಾಡಿತು. ಪಲಾಯನ ಮಾಡಿದ ಮೇಲೆ ಪ್ರಥಮವಾಗಿ ಮೊದಲನೇ ವರ್ಷ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ರಾಜಶೇಖರಮೂರ್ತಿಯವರು ಹಣಕಾಸಿನ ಮಂತ್ರಿಗಳಾದರು. ಆಗ ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿಯನ್ನು ಒಂದು ಹತೋಟಿಗೆ ತಂದ ಮೇಲೆ, ಇವರು ಹೇರಿರತಕ್ಕ ಸಾಲದ ಕಷ್ಟದಿಂದ ಬಿಡುಗಡೆ ಆದೆವು. ಆ ವಿಷಯ ನಿಮಗೆಲ್ಲರಿಗೂ ಗೊತ್ತಿದೆ. ನಾವು ಆಗ ಡಿಸೆಂಬರ್ 18ನೇ ತಾರೀಖು ಪ್ರಮಾಣವಚನವನ್ನು ಸ್ವೀಕಾರ ಮಾಡಿದೆವು . ಡಿಸೆಂಬರ್ 18 ಎಂದರೆ ಅವರದ್ದೇ ಆಯವ್ಯಯ ಇತ್ತು. ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚಿ ತಿಂಗಳವರಿಗೆ 4 ತಿಂಗಳು ಅವರದ್ದೇ ಇತ್ತು ಮಾರ್ಚಿ ತಿಂಗಳಿನಲ್ಲಿ ಒಂದು ಹೊಸ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕ ಅವಕಾಶ ನಮಗೆ ಬಂತು. ಆ ನಾಲ್ಕು ತಿಂಗಳೂ ಅವರು ಮಾಡಿದ ವವಸ್ಥೆಯಲ್ಲಿ ನಾವು ಇರಬೇಕಾಗಿ ಬಂತು.

500 ಪಿ.ಎಂ.

ಇದನ್ನೆಲ್ಲ ಸರಿಪಡಿಸಿ ಹೊರಗಡೆ ಬರುವುದಕ್ಕೆ ಸುಮಾರು ಬಂದೂವರೆ ವರ್ಷವಾಯಿತು. ಈಗ ಏನು ಮೂರು ವರ್ಷ ಆಗಿದೆ. ಈ ಮೂರು ವರ್ಷಗಳಲ್ಲಿ ಇವತ್ತಿನ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಿದೆ ಎನ್ನುವುದನ್ನು ವಿರೋಧಪಕ್ಷದವರು ಅರ್ಥಮಾಡಿಕೊಳ್ಳಬೇಕು. ನಾವು ಅರ್ಥ ಮಾಡಿಕೊಳ್ಳಬೇಕು ಮತ್ತು ಕರ್ನಾಟಕದ ಜನತೆ ಕೂಡ ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಬೇರೆ ಸಬ್ಜೆಕ್ಟ್ ಆದರೆ ಯಾವ ರೀತಿ ಮಾತನಾಡಬಹುದು ಆದರೆ ಹಣಕಾಸಿನ ವ್ಯವಸ್ಥೆಯ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಪ್ರತಿ ಕಾಸನ್ನು ಕೂಡ ನಮಗೆ ಎಲ್ಲಿಂದ ಬರುತ್ತದೆ, ಎಷ್ಟು ಆದಾಯ ಬರುತ್ತದೆ, ಆದಾಯ ಬಂದದ್ದನ್ನು ಯಾವ ರೀತಿ ಖರ್ಚುಮಾಡಬೇಕು, ಖರ್ಚುಮಾಡತಕ್ಕ ಸಮಯದಲ್ಲಿ ಏನಾದರೂ ತಪ್ಪಾಗಿದ್ದರೆ, ನಾವು ಸರಿಯಾದ ರೀತಿಯಲ್ಲಿ ಖರ್ಚು ಮಾಡಿಲ್ಲ, ನಾವು ವ್ಯಯ ಮಾಡಿದ್ದೇವೆಂದು ಹೇಳತಕ್ಕ ವ್ಯವಸ್ಥೆಯನ್ನು ನಾವೆಲ್ಲರೂ ಕೂಡ ಅರ್ಥಮಾಡಿಕೊಂಡರೆ ಬಹಳ ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ತಮಗೆಲ್ಲರಿಗೂ ಕೂಡ ಗೊತ್ತಿರುವ ಹಾಗೆ ನಮ್ಮ ಮುಂದೆ ಬಜೆಟರಿ ಅಲಾಟ್‌ಮೆಂಟ್ ಯಾವ್ಯಾವುದಕ್ಕೆ ಎಷ್ಟೆಷ್ಟು ಆಗಿದೆಯೆನ್ನುವುದನ್ನು ಸರ್ಕಾರ ನಮ್ಮ ಮುಂದೆ ಇಟ್ಟಿದೆ. ಈ ವರ್ಷದಲ್ಲಿ ನಮಗೆ ಹಣ ಎಷ್ಟು ಬರುತ್ತದೆ ಎನ್ನತಕ್ಕ ಅಂದಾಜನ್ನು ಮಾಡಲಾಗಿದೆ. ಹಾಗೆ ಮಾಡಿರತಕ್ಕ ಅಂದಾಜಿನಲ್ಲಿ ನನಗಾದರೂ ಸಂತೋಷವೇನೆಂದರೆ ಇರಿಗೇಷನ್ ಅಂಡ್ ಫ್ಲಡ್ ಕಂಟ್ರೋಲ್‌ಗೆ 600 ಕೋಟಿ, ಎನರ್ಜಿಗೆ 699 ಕೋಟಿ, ಅಗ್ರಿಕಲ್ಚರ್‌ಗೆ 213 ಕೋಟಿ, ಇಂಡಸ್ಟ್ರೀಸ್ ಅಂಡ್ ಮಿನರಲ್ಸ್‌ಗೆ 10 ಕೋಟಿ, ಎಜುಕೇಶನ್ ಅಂಡ್ ಸ್ಪೋರ್ಟ್ಸ್ ಅಂಡ್ ಕಲ್ಚರ್‌ಗೆ 252 ಕೋಟಿ, ವಾಟರ್ ಸಪ್ಲೈ ಹೌಸಿಂಗ್ ಅಂಡ್ ರೂರಲ್ ಡೆವಲಪ್‌ಮೆಂಟ್‌ಗೆ 383 ಕೋಟಿ. ಈ ಆಯವ್ಯಯದಲ್ಲಿ ಬಹಳ ಮುಖ್ಯವಾಗಿ ಯೋಚನೆ ಮಾಡತಕ್ಕದ್ದು ನನಗಾದರೂ ಯಾವುದೇ ಒಂದು ದೇಶ ಅದು ಸರಿಯಾಗಿ ಆಗಬೇಕಾದರೆ ಎನರ್ಜಿ, ಇರಿಗೇಷನ್, ಎಜುಕೇಶನ್, ಹೆಲ್ತ್ , ಕಮ್ಯುನಿಕೇಶನ್, these are the five important subjects. ಯಾವ ದೇಶದಲ್ಲಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಕಮ್ಯುನಿಕೇಶನ್ ಇಂಪ್ರೂವ್ ಮಾಡುವುದಕ್ಕೆ ಹೆಲ್ತ್‌ನ್ನು ಇಂಪ್ರೂವ್ ಮಾಡುವುದಕ್ಕೆ ಎಜುಕೇಶನ್ ಇಂಪ್ರೂವ್ ಮಾಡುವುದಕ್ಕೆ ಆಧ್ಯತೆಯನ್ನು ಕೊಡುತ್ತಾರೋ ಆ ದೇಶ ಮಾತ್ರ ಮುಂದುವರಿದಿದೆ ಎನ್ನುವುದನ್ನು ನಾವು ಯಾರೂ ಮರೆಯುವಹಾಗೆ ಇಲ್ಲ. ನಮ್ಮ ದೇಶ ಬೇಸಿಕಲಿ ಅಗ್ರಿಕಲ್ಚರ್ ಬೇಸ್ಡ್ ಕಂಟ್ರಿ. ನಾವು ವ್ಯವಸಾಯವನ್ನು ಬಿಟ್ಟರೆ ಬೇರೇನೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದು ಕೊಂಡಿದ್ದಂತಹ ಕಾಲ ಇತ್ತು. Now we are a developing country. We have developed also when compared to 1947 or 1952 or 1960-62 or 1970-72. Today we have really taken off. ಇದನ್ನು ಯಾರೂ ಮರೆಯುವ ಹಾಗೆ ಇಲ್ಲ. ಇಲ್ಲಿ ನಾವು ಮಾತನಾಡತಕ್ಕ ಸಂದರ್ಭದಲ್ಲಿ ಈ ದೇಶದಲ್ಲಿ ಏನಾಗಿದೆಯೆಂದು ಹೇಳತಕ್ಕವರು ಜಾಸ್ತಿ. ನನಗಾದರೂ ಅನಿಸುತ್ತಿದೆ. ನಮ್ಮ ಮುಂದೆ ಕಳೆದ 50 ವರ್ಷಗಳಲ್ಲಿ ನೋಡಿದಂತಹ ಚಿತ್ರವನ್ನು ನಾವು ಜ್ಞಾಪಕ ಮಾಡಿಕೊಂಡರೆ What we had 50 years back? we had nothing. ಇವತ್ತು ಡಿಫಿಕಲ್ಟೀಸ್ ಇರಬಹುದು, ಅನೇಕ ವಿಚಾರಗಳಲ್ಲಿ ತೊಂದರೆ ಆಗಿರಬಹುದು ಹಣಕಾಸಿನ ವ್ಯವಸ್ಥೆಯಲ್ಲಿ ತೊಂದರೆಯಾಗಿರಬಹುದು. ಆದರೆ ಇವತ್ತು ,

(ಮಾನ್ಯ ಬಿ.ಎಂ. ಇದಿನಬ್ಬನವರು ಅಧ್ಯಕ್ಷ ಪೀಠಕ್ಕೆ ಬಂದರು)

ನಮ್ಮ ಜೋಬಿನಲ್ಲಿ 100 ರೂಪಾಯಿ ಇಟ್ಟುಕೊಂಡು ಅಶೋಕ ಹೋಟೆಲಿಗೆ ಹೋಗಿ they want to have a dinner and gala. How can it be possible ? The difficulties also they must understand. That is what they have to think, What are the finances of our country. ನಮ್ಮ ಸ್ಟೇಟ್‌ನಲ್ಲಿ

ನಮಗೆ ಬರತಕ್ಕ ಆದಾಯವೇನು? ಸೆಂಟ್ರಲ್ ಬಜೆಟ್‌ನಿಂದ ಬರತಕ್ಕ ಆದಾಯವೇನು? ಬರತಕ್ಕದ್ದನ್ನು ಯಾರೇ ಚೀಫ್‌ಮಿನಿಸ್ಟರ್ ಆದರೂ ಕೂಡ ಯಾರೇ ಫೈನಾನ್ಸ್ ಮಿನಿಸ್ಟರ್ ಆದರೂ ಕೂಡ ಅದನ್ನು ಹಂಚಬೇಕಾಗುತ್ತದೆ. ಪ್ರತಿಯೊಬ್ಬರಿಗೂ ಪ್ರತಿಯೊಂದು ಬಾಬಿನಲ್ಲೂ ಕೊಡಬೇಕಾಗುತ್ತದೆ. ಕೊಡತಕ್ಕ ಸಂದರ್ಭದಲ್ಲಿ ಅದರಲ್ಲಿ ಮಂಡನೆ ಮಾಡಿರತಕ್ಕ ಬಜೆಟನ್ನು ತೆಗೆದು ನೋಡಿದಾಗ, ಆದ್ಯತೆಯನ್ನು ವಿದ್ಯುಚ್ಛಕ್ತಿಗೆ ಕೊಟ್ಟಿದೆ, ರೂರಲ್ ಡೆವಲಪ್‌ಮೆಂಟ್‌ಗೆ ಕೊಟ್ಟಿದೆ. ಅಗ್ರಿಕಲ್ಚರ್‌ಗೆ ಕೊಟ್ಟಿದೆ. ಅಂದ ಮೇಲೆ ಇದನ್ನು ನಾವು ಒಪ್ಪಿಕೊಳ್ಳಬೇಕೇ ಬೇಡವೇ ಎನ್ನುವುದನ್ನು ಯಾರು ಕ್ರಿಟಿಸೈಸ್ ಮಾಡುತ್ತಾರೋ, ಅವರಿಗೇ ಬಿಟ್ಟು ಬಿಟ್ಟು ನಾವೆಲ್ಲರೂ ಕೂಡ ಈ ಬಗ್ಗೆ ಯೋಚನೆ ಮಾಡಬೇಕು. ಯಾವುದೇ ಒಂದು ದೇಶವಾಗಲೀ, ಒಂದು ಸಂಸಾರವಾಗಲೀ, ಅಥವಾ ಒಂದು ಮನೆಯಾಗಲೀ ನಮ್ಮಲ್ಲಿರತಕ್ಕಂಥ What are all the resources? ಅವುಗಳು ಯಾವ ಕಡೆಯಿಂದ ಬರುತ್ತವೆ ಎಂದು ನೋಡಬೇಕು. ಈಗ ನಮ್ಮ ದೇಶದ ಕಥೆ ಏನಾಗಿದೆ? Nobody is prepared to pay the tax. Nobody wants to accept the taxes and they don't want to pay also. ಮೊನ್ನೆ ನಾನು ಒಂದು ಮೀಟಿಂಗ್ ನಡೆಸಿದೆ. ನಮ್ಮ ತಾಲ್ಲೂಕಿನ ಚನ್ನರಾಯಪಟ್ಟಣ ಒಂದು ಸಣ್ಣ ಮುನಿಸಿಪಾಲಿಟಿ. ಅಲ್ಲಿ 30 ಲಕ್ಷ ರೂಪಾಯಿ ಟ್ಯಾಕ್ಸ್ ಡ್ಯೂಸ್ ಇದೆ. ಯಾರೂ ಕೂಡ ಟ್ಯಾಕ್ಸ್‌ನ್ನು ಕೊಡುವುದಿಲ್ಲ. ನನಗೆ ಗೊತ್ತಿರುವ ಹಾಗೆ ಪಾಶ್ಚಿಮಾತ್ಯ ದೇಶಗಳಲ್ಲಿ We need not have anybody to collect taxes. We don't have such voluntarily paying taxes. We don't have that mind. ಒಂದು ಐದು ಪೈಸೆ ಜಾಸ್ತಿ ಮಾಡಿದರೆ ಅದಕ್ಕೆ ಒಂದು ಸ್ಟ್ರೈಕ್. Without paying taxes, how can you have any programme and any policies? ಇದರ ಬಗ್ಗೆ ಯಾರೂ ಕೂಡ ಚಿಂತನೆ ಮಾಡುವುದಿಲ್ಲ. ನಾನು ಮೂರು ವರ್ಷಗಳಿಂದ ಈ ಸದನದಲ್ಲಿ ನೋಡುತ್ತಿದ್ದೇನೆ, ಯಾರೂ ಕೂಡ ಸಂತೋಷವಾಗಿಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ಇವತ್ತು 30 ಲಕ್ಷ ರೂಪಾಯಿಗಳ ಟ್ಯಾಕ್ಸನ್ನು ಒಂದು ಸಣ್ಣ ಮುನಿಸಿಪಾಲಿಟಿಯಲ್ಲಿ ಕೊಡದೇ ಹೋದರೆ ಏನು ಮಾಡಬೇಕು? ನಾವು ತಾಲ್ಲೂಕು ಸಮಿತಿ ಮೀಟಿಂಗ್ ಮಾಡಿದಂಥ ಸಮಯದಲ್ಲಿ ಯಾರೂ ಕೂಡ ಮನೆಕಂದಾಯ ಕೊಡುವುದಿಲ್ಲ. ಅವರ ಮನೆ ಬಾಗಿಲಿಗೆ ಹತ್ತು ಸಾರಿ ಹೋದರೂ ಕೂಡ ಯಾರೂ ಕೊಡುವುದಿಲ್ಲ. ಇದನ್ನೆಲ್ಲಾ ನಾವು ಯೋಚನೆ ಮಾಡಬೇಕು. ಏಕೆಂದರೆ ಪ್ರತಿಯೊಬ್ಬರೂ ಕೂಡ, ಯಾವ ದೇಶದಲ್ಲೇ ಆಗಲಿ, ನಮಗೆ ಹಾಕತಕ್ಕಂಥ ಟ್ಯಾಕ್ಸ್‌ನ್ನು ವಾಲಂಟರಿಯಾಗಿ ಕೊಡದೇ ಹೋದರೆ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಜನರಿಗೆ ನಾವು ಮನದಟ್ಟುಮಾಡಿ ಕೊಡಬೇಕಾಗಿದೆ. ಇವತ್ತು ಎಲೆಕ್ಟ್ರಿಸಿಟಿ ವಿಚಾರ ಬಂದರೆ ಒಬ್ಬ ಇಂಡಸ್ಟ್ರೀಯವರು ಇಷ್ಟು ಕೊಟ್ಟಿಲ್ಲವೆಂದು ಹೇಳುತ್ತೇವೆ. ಇಲ್ಲಿ ರೂರಲ್ ಏರಿಯಾದಲ್ಲಿ ಲೈಟುಗಳು ಉರಿಯುವುದಿಲ್ಲ. ಏಕೆಂದು ಕೇಳಿದರೆ ಮನೆಕಂದಾಯ ಕಟ್ಟಿಲ್ಲ, ನಾವು ಎಲ್ಲಿಂದ ತಂದು ಕೊಡುವುದು ಎಂದು ಮಂಡಲ ಪಂಚಾಯತ್‌ನವರು ಹೇಳುತ್ತಾರೆ. ಇದನ್ನು ನಾವು ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ಬಹುಮುಖ್ಯವಾಗಿ ಇಲ್ಲಿ ಮಾತನಾಡತಕ್ಕಂಥ ವಿಚಾರಗಳನ್ನು ನೋಡಿದರೆ ಆಡಳಿತ ಪಕ್ಷದವರು ನಾವು ಮಾಡುತ್ತಾ ಇರತಕ್ಕಂಥಾದು ಎಲ್ಲ ಕರೆಕ್ಟ್ ಎನ್ನತಕ್ಕಂಥಾದ್ದು ಒಂದು ವಿಚಾರ. ವಿರೋಧಪಕ್ಷದವರು ಆಡಳಿತ ಪಕ್ಷದವರು ಮಾಡುತ್ತಾ ಇರತಕ್ಕಂಥಾದ್ದು ಎಲ್ಲವೂ ಕೂಡ ತಪ್ಪು ಎಂದು ಮಾತನಾಡತಕ್ಕದ್ದು ಮತ್ತು ಯಾವುದೇ ಗಹನವಾದ ವಿಷಯ ಬಂದರೂ ಕೂಡ ಈ ದೇಶದ ಸ್ವಾತಂತ್ರ್ಯಬಗ್ಗೆ, ಈ ದೇಶದ ಒಗ್ಗಟ್ಟಿನ ಬಗ್ಗೆ, ಜಾತ್ಯಾತೀತತೆ ಬಗ್ಗೆ ಮಾತನಾಡತಕ್ಕದ್ದು only vote catching. ಆ ರೂಪದಲ್ಲಿ, ಆ ದಾರಿಯಲ್ಲಿ ನಾವು ಮಾತನಾಡುತ್ತೇವೆ ಮತ್ತು ಈ ದೇಶದ ಮತ್ತು ಸಮಾಜದ ಸಮಗ್ರತೆಗೆ, ಅವರ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಮಾತನಾಡತಕ್ಕದ್ದು ಬಹಳ ವಿರಳ ಎಂದು ತಿಳಿಸಲಿಕ್ಕೆ ನಾನು ವಿಷಾದ ಪಡುತ್ತೇನೆ. ಏಕೆಂದರೆ ನಮ್ಮಲ್ಲಿ ಬಹಳಷ್ಟು ವಿದ್ಯಾವಂತರು ನಾವು ಎಲ್ಲಿಯಾದರೂ

ಕೂಡ ಹೋದರೆ ಈ ದೇಶದಲ್ಲಿ ನೀವು ಏನು ಮಾಡಿದ್ದೀರಿ ಎಂದು ಕೇಳುತ್ತಾರೆ. ಒಂದು ದಿವಸ ವಿರೋಧ ಪಕ್ಷದ ಸದಸ್ಯರೊಬ್ಬರು ಹೇಳಿದರು. ಏನೆಂದರೆ ಈ ದೇಶವನ್ನು ಕಾಂಗ್ರೆಸ್‌ನವರು ಸರ್ವನಾಶ ಮಾಡಿದರು ಎಂದು. ಅವರು ಹಾಗೆ ಹೇಳಿದಾಗ I really lost my temper. I told him, ನಿಮ್ಮ ಇತಿಹಾಸ ಗಾಂಧೀಜಿಯವರನ್ನು ಸಂಹಾರ ಮಾಡಿದ್ದರಿಂದ ಶುರುವಾಗಿ ಬಾಬರಿ ಮಸೀದಿಯನ್ನು ನೆಲಸಮ ಮಾಡಿದ್ದರವರೆಗೆ ಬಂದಿದೆ ನಿಮ್ಮ ಕಥೆ ಗೊತ್ತಿದೆ. You are not thinking about the integrity of this country, independence of the country, the hard earned independenceನ್ನು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಅಲ್ಲ. vote catching ಮಾತ್ರ ಮಾಡುತ್ತಿದ್ದೇವೆ ಎನ್ನುವ ಮಾತನ್ನು ನಾನು I told him this by losing my temper ಪಂಡಿತ್ ಜವಹರ್‌ಲಾಲ್ ನೆಹರೂ ಅವರ ಮಾತನ್ನು ಎಷ್ಟು ಜನ ಜ್ಞಾಪಕ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಅವರು ಏನನ್ನು ಹೇಳುತ್ತಿದ್ದರು? ನಾವು ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭ ಮಾಡಿದ ದಿವಸ ನಮ್ಮ ಹತ್ತಿರ ಎಷ್ಟು, ಹಣ ಇತ್ತು? ಈಗ ಏಳನೇ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಎಂಟನೇ ಪಂಚವಾರ್ಷಿಕ ಯೋಜನೆಗೆ ಬಂದಿದ್ದೇವೆ ಅಲ್ಲಿಂದ ಇಲ್ಲಿಯವರೆಗೆ ದೇಶದಲ್ಲಿ ಏನೂ ಆಗಿಲ್ಲವೆ? ಇದರ ಬಗ್ಗೆ ಯೋಚನೆ ಮಾಡತಕ್ಕದ್ದು ಪ್ರತಿಯೊಬ್ಬರ ಕರ್ತವ್ಯವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇವೆ.

ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಕ್ಕಳು ಒಂದೇ ಆಗಿಲ್ಲ. ಆವತ್ತು 30 ಕೋಟಿ ಇದ್ದಿರಿ, ಇವತ್ತು 85 ಕೋಟಿ ಆಗಿದ್ದೀರಿ. ಮಕ್ಕಳು ಆಗದಹಾಗೆ ತಡೆಗಟ್ಟದೆ ನೀವು ಈ ರೀತಿ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ.

ಮಕ್ಕಳು ಏತಕ್ಕೆ ಆಯಿತು?

ಶ್ರೀ ಜೆ. ಸಿ. ಮಾಧುಸ್ವಾಮಿ : ಎರಡು ಕೆಲಸ ಆಗಿದೆ. ಮನುಷ್ಯನ ಬೆಲೆ ಕಡಿಮೆಯಾಗಿದೆ. ದುಡ್ಡಿನ ಬೆಲೆ ಕಡಿಮೆಯಾಗಿದೆ. ಆ ದೇಶದಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ ಅಷ್ಟೆ.

ಡಾ॥ ಎನ್. ಬಿ. ನಂಜಪ್ಪ : ಸಾವಿರಾರು ವರ್ಷಗಳಿಂದ ನೀವು ಅವರನ್ನು ಮುಗ್ಧರನ್ನಾಗಿ ಮಾಡಿ, ಅವಿದ್ಯಾವಂತರನ್ನಾಗಿ ಮಾಡಿ, ಮೂಢತನದಲ್ಲಿ ಅವರನ್ನು ಮೂಲೆಗೆ ತಳ್ಳಿದ್ದರಿಂದ ಆಗಿದೆ. ನೀವು ಇದನ್ನು ತೊಳೆಯುವುದಕ್ಕೆ ಪ್ರಯತ್ನ ಮಾಡಬೇಕು. What you have done for it? Have you done?

ಒಬ್ಬ ಮಾನ್ಯ ಸದಸ್ಯರು : ಮಾಡಿದವರು ಯಾರು ಸ್ವಾಮಿ, ಮಾಡಿದವರು ನೀವು, ನಾವಲ್ಲ.

ಡಾ॥ ಎನ್. ಬಿ. ನಂಜಪ್ಪ : ಏನು ಎಂಬುದನ್ನು ಹೇಳುತ್ತೇನೆ. I am going to tell you. That is what I am telling.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದನ್ನು ನೀವು ಯಾರಿಗೆ ಹೇಳುತ್ತಿದ್ದೀರಿ. ನೀವು ಸರ್ಕಾರ ಮಾಡುತ್ತಿದ್ದೀರಿ. ನೀವು ವಿರೋಧ ಪಾರ್ಟಿಯಿಂದ ಮಾತನಾಡುವ ಹಾಗೆ ಮಾತನಾಡುತ್ತಿದ್ದೀರಿ. ಸುಮಾರು 37-38 ವರ್ಷಗಳಿಂದ ಆಡಳಿತ ಪಕ್ಷದ ಸದಸ್ಯರಾಗಿ, ಯಾರನ್ನು ಟೀಕೆ ಮಾಡುತ್ತಿದ್ದೀರಿ ಎಂಬುದು ನಮಗೆ ಅರ್ಥವಾಗಬೇಕು. ದಯವಿಟ್ಟು ಬಿಡಿಸಿ ಹೇಳಿ.

ಡಾ॥ ಎನ್. ಬಿ. ನಂಜಪ್ಪ : ಮಕ್ಕಳು ಎಂದು ಹೇಳಿದ್ದಕ್ಕಾಗಿ ನಾನು ಹೇಳಿದೆ. ನಾನು ನಿಮ್ಮನ್ನು ಟೀಕೆ ಮಾಡಲಿಲ್ಲ. ಇರತಕ್ಕಂಥ ವಿಚಾರಗಳ ಬಗ್ಗೆ ಚಿಂತನೆ ಮಾಡಿದೆ. ಕೇವಲ ವೋಟು ಪಡೆಯುವುದಕ್ಕೋಸ್ಕರ ಅಥವಾ ಯಾವುದಾದರೊಂದು ಮಂಡನೆ ಮಾಡಿದರೆ, ಪುಸ್ತಕ ಹರಿದು ಹಾಕುವಂಥಾದ್ದು, ಇಲ್ಲದೇಹೋದರೆ, ನೀವು ಏನನ್ನೂ ಮಾಡಲಿಲ್ಲವೆಂದು ಹೇಳುವಂಥಾದ್ದು. What is this? Otherwise you suggest some good suggestions. 3,005 ಕೋಟಿ ರೂಪಾಯಿ ಇವತ್ತು ಆಯವ್ಯಯದಲ್ಲಿದೆ. 7 ಸಾವಿರ ಕೋಟಿ ಎಲ್ಲಿಂದ ಬರುತ್ತದೆ ಎಂದು ಹೇಳಿದರೆ, ಮತ್ತೆ ಜಾಸ್ತಿ ಹಣವನ್ನು ಅಲಾಟ್ ಮಾಡಬಹುದು. You don't suggest. You only criticise on it. ಅದನ್ನು ನಾನು ಹೇಳಿದೆ. ನಾವು ಮೂಲಭೂತವಾಗಿ ಯೋಚನೆ ಮಾಡತಕ್ಕ ಸಂದರ್ಭದಲ್ಲಿ ನನಗಾದರೂ ಅನಿಸುತ್ತದೆ. ಈ ದಾರಿಯಲ್ಲಿ ನಾವು ಚಿಂತನೆ ಮಾಡುತ್ತಿದ್ದೇವೆಯೇ? ನಾವು ಆವತ್ತು ಏನಾಗಿದ್ದೆವು, ಇವತ್ತು ಏನಾಗಿದ್ದೇವೆ ಎನ್ನುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆಯೇ, Have we not achieved something in this country? We have really achieved. Even the International Monetary Fund which have funded India, have accepted it. They have given a very good report. That you have to accept it. 33 ಕೋಟಿ ಜನಕ್ಕೆ ತಿನ್ನುವುದಕ್ಕೆ ಅನ್ನವಿಲ್ಲದೆ, ಕ್ಯೂ ನಿಂತು ಹುಳುಕಲು ಗೋಧಿಯನ್ನು ತೆಗೆದುಕೊಂಡು ತಿನ್ನುವಂಥ ದೇಶದಲ್ಲಿ, ಇವತ್ತು, We have achieved something wonderful. Green Revolution ಆಗಿದೆ. ಇವತ್ತು 85 ಕೋಟಿ ಜನಸಂಖ್ಯೆಗೆ ಅನ್ನವನ್ನು ಕೊಡತಕ್ಕ ಶಕ್ತಿಯನ್ನು ಈ ದೇಶ ಪಡೆದಿದೆ. ಇದನ್ನು ಯಾರು ಕೊಟ್ಟರು That credit will go to the Congress Party. Nobody else can get it. Nobody else because other people what they have done? They have only hindered the progress of this country. In every step you have created obstacles to gain votes or to establish some of the political organisations. ನೀವು ಎಲ್ಲರೂ ಕೂಡ ಸೇರಿ. ಈ ದೇಶದ ಒಗ್ಗಟ್ಟಿಗೆ, ಈ ದೇಶದ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ, ಈ ದೇಶದ ಪ್ರಗತಿಯನ್ನು ಸಾಧಿಸುವುದಕ್ಕಾಗಿ ನೀವು ಸಹಾಯ ಮಾಡಿದ್ದರೆ, ಈ ದೇಶ ಇನ್ನೂ ಮುಂದೆ ಹೋಗುತ್ತಿತ್ತು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ತಾವು ಸೆನ್ಸಸ್ ರಿಪೋರ್ಟ್ ತರಿಸಿಕೊಂಡು ನೋಡಿ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಬಡತನದ ರೇಖೆ ಜಾಸ್ತಿಯಾಗಿದೆಯೇ, ಕಡಿಮೆಯಾಗಿದೆಯೇ ಎಂಬುದು ಗೊತ್ತಾಗುತ್ತದೆ. ರೇಟ್ ಆಫ್ ಲಿಟರಸಿ ಮೊದಲು ಎಷ್ಟಿತ್ತು, ಈಗ ಎಷ್ಟಿದೆ ಎಂಬ ಬಗ್ಗೆ ಸ್ವಲ್ಪ ಓದಿ. ಏನೋ ಸಾರಾಸಗಟಾಗಿ ಭಾಷಣ ಮಾಡುತ್ತಾ, ಇಲ್ಲಿ ಯಾರೂ ಕುಳಿತಿಲ್ಲವೆಂದು ಈ ತರಹ ಹೊಡೆದುಕೊಂಡು ಹೋಗುವುದಿಲ್ಲ.

ಡೆಪ್ಯುಟಿ ಛೇರ್ಮನ್ : ಡಾ॥ ನಂಜಪ್ಪನವರೇ, ನೀವು ಯೀಲ್ಡ್ ಆಗುವುದು ಬೇಡ.

Dr. N. B. NANJAPPA : Why you are so irritated, I cannot understand. Are you not belonging to this country? Are you not belonging to this Karnataka State? Why are you so irritated, I cannot understand. When we are thinking about the country

and the society, you deeply think over it. What you are doing? You are only creating problems. You have created enough problems. At least you realise in future. At least you join with us to build the nation, to build the unity and integrity. That is what I request you.

ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರ್‌ಗೆ 213 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ರೂರಲ್ ಡೆವಲಪ್‌ಮೆಂಟ್‌ಗೆ 113 ಕೋಟಿ ರೂಪಾಯಿಗಳು ಮತ್ತೆ ವಾಟರ್‌ಸಪ್ಲೈ ಮತ್ತು ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್‌ಗೆ 383 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಟ್ಟು 400 ಕೋಟಿ ಚಿಲ್ಲರೆ ರೂಪಾಯಿಗಳನ್ನು ರೂರಲ್ ಡೆವಲಪ್‌ಮೆಂಟ್ ಮತ್ತು ಸೋಸಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಕೊಡಲಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಮುಖ್ಯವಾಗಿ ವಿದ್ಯುಚ್ಛಕ್ತಿ, ಇರಿಗೇಶನ್, ಎಜುಕೇಶನ್ ಮತ್ತು ಅಗ್ರಿಕಲ್ಚರಲ್‌ಗೆ ಸಾಕಷ್ಟು ಆದ್ಯತೆಯನ್ನು ಈ ಬಜೆಟ್‌ನಲ್ಲಿ ಕೊಡಲಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಗೆ ಈಗ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಸಬ್ಸಿಡಿ, ಇರಿಗೇಷನ್ ಸಬ್ಸಿಡಿ, ರೂರಲ್ ಎಲೆಕ್ಟ್ರಿಫಿಕೇಶನ್ ಸಬ್ಸಿಡಿ, ಫುಡ್‌ಸಬ್ಸಿಡಿ, ಹೌಸಿಂಗ್ ಸಬ್ಸಿಡಿ, ದಟ್ ರಿಲೀಫ್ ಸಬ್ಸಿಡಿ, ಟ್ರಾನ್ಸ್‌ಪೋರ್ಟ್ ಸಬ್ಸಿಡಿ, ಅರ್ಬನ್ ವಾಟರ್‌ಸಪ್ಲೈ ಸಬ್ಸಿಡಿ, ಇಂಡಸ್ಟ್ರಿ ಸಬ್ಸಿಡಿ ಇಷ್ಟೆಲ್ಲಾ ಸೇರಿಸಿದರೂ ಕೂಡ ನಮ್ಮ ಕರ್ನಾಟಕ ರಾಜ್ಯ ಸುಮಾರು 704 ಕೋಟಿ ರೂಪಾಯಿಗಳ ಸಬ್ಸಿಡಿ ಇದರಲ್ಲಿ ಕೊಟ್ಟಂತಾಗುತ್ತದೆ. ಒಂದೊಂದು ಬಾಬಿನಲ್ಲಿ ತೆಗೆದುಕೊಂಡರೂ ಕೂಡ ಈ ಬಜೆಟ್‌ನಲ್ಲಿ ಬಹಳಷ್ಟು ವಿಚಾರ ಇದೆ. ಮತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಈ ವರ್ಷ ಆದಂತಹ ಮಳೆಯಿಂದ ಮತ್ತು ಮಳೆ ಇಲ್ಲದೆ ಕೆಲವು ಭಾಗಗಳಲ್ಲಿ ಉಂಟಾದ ಬರಗಾಲದಿಂದ ಎಷ್ಟು ಕಷ್ಟ ಆಯಿತು ಅದಕ್ಕೆ ಎಷ್ಟು ಹಣ ನಮ್ಮ ಸರ್ಕಾರ ಖರ್ಚು ಮಾಡಿದೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಸೆಂಟ್ರಲ್ ಗೌರ್ನಮೆಂಟ್‌ನಿಂದ 200 ಕೋಟಿ ರೂಪಾಯಿಗಳನ್ನು ಕೇಳಿದರೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸ್ಟೇಟ್ ಗೌರ್ನಮೆಂಟ್‌ನಿಂದ 58.85 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಆಗಿದ್ದರೂ ಕೂಡ ಇನ್ನು ಅನೇಕ ಕೆಲಸಕಾರ್ಯಗಳು ಆಗಬೇಕಾಗಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ನಾನು ಜಾಸ್ತಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ನಮಗೆ ಅಗ್ರಿಕಲ್ಚರ್ ಪ್ರೈಪ್ಸ್ ಈ ಸಂದರ್ಭದಲ್ಲಿ ಅಗ್ರಿಕಲ್ಚರ್ ಮೇಲೆ ಜಾಸ್ತಿ ಟ್ಯಾಕ್ಸ್ ಆಗಿದೆ, ಸರ್ಕಾರ ಇದರ ಬಗ್ಗೆ ಗಮನಿಸಿ ಕಡಿಮೆ ಮಾಡಿದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪವರ್‌ಗೆ ಇವತ್ತು ಒಂದು ದೊಡ್ಡ ಗಂಡಾಂತರ ಬಂದಿದೆ ಎಂದೂ ಹೇಳಿದರೂ ಕೂಡ ತಪ್ಪೇನೂ ಇಲ್ಲ. ಕಾರಣ ನನಗೆ ಗೊತ್ತಿರುವ ಹಾಗೆ 10 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಒಂದು ಯೂನಿಟ್ ಎಲೆಕ್ಟ್ರಿಸಿಟಿ ಉತ್ಪಾದನೆ ಜಾಸ್ತಿ ಪ್ರೊಡ್ಯೂಸ್ ಮಾಡಿಲ್ಲ. ಆದರೆ ಸದರನ್ ಸ್ಟೇಟ್‌ಗಳಲ್ಲಿ ಕೇರಳ ತಮಿಳುನಾಡು ಆಂಧ್ರಪ್ರದೇಶ ಮಹಾರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದಾರೆ. ನಮ್ಮಲ್ಲಿ ಏತಕ್ಕೆ ಆಗಿಲ್ಲ ಕಾರಣ ಗೊತ್ತಿಲ್ಲ, ಸರ್ಕಾರ ಇದರ ಬಗ್ಗೆ ಹಿಂದೆ ಬಿದ್ದಿದೆ ಎನ್ನುವುದರಲ್ಲಿ ಯಾವ ಸಂಶಯ ಕೂಡ ಇಲ್ಲ. ಕಳೆದ ವರ್ಷ ಬಂಗಾರಪ್ಪನವರ ನೇತೃತ್ವದಲ್ಲಿ ಪ್ರೈವೇಟ್ ಆರ್ಗನೈಸೇಶನ್ಸ್ ಮೂಲಕ ಎಲೆಕ್ಟ್ರಿಸಿಟಿ ಉತ್ಪಾದನೆ ಜಾಸ್ತಿ ಮಾಡುವ ಬಗ್ಗೆ ದೊಡ್ಡ ಸ್ಕೀಮ್ ಹಾಕಿದ್ದರು ಎಂದು ನಾನು ಕೇಳಿದೆ. ಅಂತಹ ಪ್ರಯತ್ನ ಏನಾಯಿತು? ಅದು ಎಷ್ಟರ ಮಟ್ಟಿಗೆ ಫಲಕಾರಿ ಆಗಿದೆಯೋ ನನಗೆ ಗೊತ್ತಿಲ್ಲ. ಪವರ್ ಕಾರ್ಪೋರೇಷನ್ ಮತ್ತು ಕೆಇಬಿ ಬಗ್ಗೆ ಮಾತನಾಡಲು ನಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್ ಎಸ್.ಎಂ. ಕೃಷ್ಣಾರವರು ಒಂದು ಮೀಟಿಂಗ್ ಕರೆದು ಅಲ್ಲಿ ಡಿಸ್ಕಸ್ ಮಾಡಿದಂಥ ಸಮಯದಲಿ ಅವರಲಿ ದ ಮೂಲಭೂತ

ಸಮಸ್ಯೆಗಳು ಎಲ್ಲರಿಗೂ ಅರ್ಥವಾಯಿತು. ನಮ್ಮಲ್ಲಿರತಕ್ಕಂಥ ವಿದ್ಯುಚ್ಛಕ್ತಿ ಸ್ಥಾವರಗಳೂ ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. distributing system and conducting system, ಏನು ಇದೆಯೋ ಅದು 30 ವರ್ಷಗಳ ಹಿಂದೆ 110 ಕೆ.ವಿ. ಲೈನ್ ಏನು ಮಾಡಿತ್ತು ಅದು ಕರ್ನಾಟಕ ರಾಜ್ಯದ ಎಲ್ಲಾ ಕಡೆ ಇದೆ. ಸಮಗ್ರವಾಗಿ 220 ಕೆ.ವಿ. ಪರಿವರ್ತನೆ ಆಗದ ಹೊರತು ನಾವು ಹೊರಗಡೆಯಿಂದ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡರೂ ಕೂಡ ಈ 110 ಕೆವಿ ಲೈನ್ ಇರುವುದರಿಂದ distributing system ನಲ್ಲಿ ಬಹಳಷ್ಟು ಡಿಫೆಕ್ಟ್ ಇರುವುದರಿಂದ ಅದನ್ನು ಈಗ ಅಲಾಟ್ ಆಗಿರತಕ್ಕಂಥ ಹಣದಲ್ಲಿ ಅದನ್ನು 220 ಕೆವಿಗೆ ಕನ್‌ವರ್ಟ್ ಮಾಡಿ, ಎಲ್ಲಾ ಕಡೆ distribute ಮಾಡುವಂಥ ವ್ಯವಸ್ಥೆ ಆದರೆ, ಆಗ ರೂರಲ್ ಏರಿಯಾದಲ್ಲಿ ಎಲೆಕ್ಟ್ರಿಸಿಟಿಯನ್ನು ಸಪ್ಲೈ ಮಾಡುವುದಕ್ಕೆ ಬಹಳಷ್ಟು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. Sorry, it is 110 Kv . ನಾನು 120 ಎಂದು ಹೇಳಿದ್ದೇನೆ. 110 must be converted into 220. ಕೆಲವು ಕಡೆ ಕನ್‌ವರ್ಷನ್ ಆಗಿದೆ. ಈ ಕೆಲಸವನ್ನು ಎಲ್ಲಾ ಕಡೆ ಸಮಗ್ರವಾಗಿ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ uniform distribution ಮಾಡುವುದಕ್ಕೆ ಸರಿಯಾಗುತ್ತದೆ. ಎಲ್ಲೆಲ್ಲಿ substation ಬೇಕೋ? ಎಲ್ಲೆಲ್ಲಿ ಕನ್‌ವರ್ಷನ್ ಆಗಬೇಕಾಗಿದೆಯೋ? ಇದರ ಬಗ್ಗೆ ಜಾಸ್ತಿಗಮನವನ್ನು ಸರ್ಕಾರ ಈಗ ಅಲಾಟ್ ಮಾಡಿರತಕ್ಕಂಥ ಹಣದಲ್ಲಿ ಕೊಟ್ಟರೆ ಅದು ಬಹಳಷ್ಟು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಜಿಲ್ಲಾ ಪರಿಷತ್ತಿನ ವ್ಯವಸ್ಥೆಯಲ್ಲಿ ಈ ರಸ್ತೆಗಳಿಗೆ ಕೊಟ್ಟಿರತಕ್ಕಂಥ ಹಣ ಏನು ಇದೆಯೋ ಅದು ಸಾಲದು. ಸಾಮಾನ್ಯವಾಗಿ ರಸ್ತೆಗಳು, ಎಲ್ಲಾ ಹಾಳಾಗಿ ಅದರ ಬಗ್ಗೆ ಚಿಂತನೆ ಮಾಡಬೇಕು. ಸರ್ಕಾರ ಇನ್ನಷ್ಟು ಹಣವನ್ನು ಈ ರೂರಲ್ communication ಗೆ ಒದಗಿಸಿದರೆ ಬಹಳ ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಅಗ್ರಿಕಲ್ಚರ್‌ಗೆ ಸಾಕಾದಷ್ಟು ಒತ್ತನ್ನು ಸರ್ಕಾರ ಕೊಟ್ಟಿದೆ, Central Government as well as State Government ಹಿಂದಿನಿಂದಲೂ ಕೊಡುತ್ತಾ ಬಂದಿದೆ. ಈಗಲೂ ಕೊಡುತ್ತಿದೆ ಎನ್ನುವ ಬಗ್ಗೆ ನಾವು ಯಾರೂ ಕೂಡ ಸಂಶಯ ಪಡಬೇಕಾಗಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ರೈತನ ಮಗನಾಗಿ I am a very good agriculturist.

ರೈತರ ಸಮಸ್ಯೆ ಎಲ್ಲಾ ನನಗೆ ಗೊತ್ತಿದೆ. ಬಹಳಷ್ಟು ಜನ ರೈತರ ಬಗ್ಗೆ ಕಣ್ಣೀರನ್ನು ಧರಿಸುವುದನ್ನು ನಾನು ನೋಡಿದ್ದೇನೆ. ಆ ಕಣ್ಣೀರು ನಿಜವಾಗಿ ಕಾಲುವೆಯಾಗಿ ಹರಿದಿದ್ದರೆ, ಅದು ಈ ವಿಧಾನಸೌಧ ಬಿಟ್ಟು ಹೈಕೋರ್ಟ್‌ನ್ನು ದಾಟಿ ಕಬ್ಬನ್ ಪಾರ್ಕನ್ನು ಸೇರಬೇಕಾಗಿತ್ತು. ಕಾರಣಾಂತರದಿಂದ ಅಷ್ಟು ಹರಿಸಿಲ್ಲ, ಸುಮ್ಮನೆ ಬಾಯಿಯಲ್ಲಿ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಾವು ಸಾಮಾನ್ಯವಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಅಯ್ಯೋ, ರೈತನ ಮೇಲೆ ಅಷ್ಟು ಭಾರ ಬಿದ್ದುಬಿಟ್ಟಿದೆ ಇಷ್ಟು ಭಾರ ಬಿದ್ದುಬಿಟ್ಟಿದೆ ಎಂದು ಹೇಳಿ, ನಮಗೂ ಕೂಡ ಮಾತನಾಡುವುದಕ್ಕೆ ಚಾನ್ಸ್ ಕೊಡದ ರೀತಿಯಲ್ಲಿ ಅವರು ಮಾತನಾಡಿ 3 ವರ್ಷವನ್ನು ಮುಗಿಸಿಬಿಟ್ಟರು. ಇದನ್ನೆಲ್ಲಾ ಯೋಚನೆ ಮಾಡಿದಾಗ ನಾವು ಎತ್ತ ಕಡೆ ಹೋಗುತ್ತಿದ್ದೇವೆ, ಏನನ್ನು ಯೋಚನೆ ಮಾಡುತ್ತಿದ್ದೇವೆ ಮತ್ತು ಯಾವುದರ ಬಗ್ಗೆ ಚಿಂತನೆ ಮಾಡಿಕೊಂಡು ಈ ಸದನದೊಳಗೆ ಬರುತ್ತೇವೆ? ಎನ್ನುವುದರ ಬಗ್ಗೆ I am a confused person. ಚೆನ್ನಾಗಿ ಮತ್ತು ಗಹನವಾಗಿ ಮಾತನಾಡತಕ್ಕಂಥ ಬಹಳಷ್ಟು ಜನ ಸದಸ್ಯರಿದ್ದಾರೆ. ಆದರೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಮಗ್ರವಾಗಿ ಚಿಂತನೆ ಮಾಡಿ ಏನಾದರೂ ಒಂದು ಮಾರ್ಗವನ್ನು ತೋರಿಸತಕ್ಕಂಥ ರೀತಿಯಲ್ಲಿ ನಾವು ಏಕೆ ಮಾತನಾಡುವುದಿಲ್ಲ ಎನ್ನುವುದರ ಬಗ್ಗೆ ನನಗೆ ಸ್ವಲ್ಪ ಚಿಂತನೆ ಇದೆ. ಇನ್ನು ಮುಂದಾದರೂ ನಾವೆಲ್ಲರೂ ಈ ರೀತಿ ಯೋಚನೆ ಮಾಡಿದರೆ

ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಏಜುಕೇಶನ್‌ಗೆ ಸಾಕಷ್ಟು ಹಣವನ್ನು ಕೊಡುತ್ತಾ ಇದ್ದೇವೆ. ಎಜುಕೇಶನ್ ಮತ್ತು ಆರೋಗ್ಯಕ್ಕೆ ಖರ್ಚು ಮಾಡಿದ ಹಣದಿಂದ ಯಾವ ಮಟ್ಟವನ್ನು ತಲುಪಬೇಕಾಗಿತ್ತೋ ಆ ಮಟ್ಟವನ್ನು ತಲುಪಿಲ್ಲ ಏಕೆಂದರೆ ಆಯವ್ಯಯದಲ್ಲಿ ನಿಗದಿಪಡಿಸಿರುವಂತೆ ಸಾಕಷ್ಟು ಹಣವನ್ನು ನಾವು ಖರ್ಚು ಮಾಡುತ್ತಾ ಬಂದಿದ್ದೇವೆ. ಆದರೆ ಇದರಿಂದ ಎಷ್ಟು ಮಟ್ಟಿನ ಪ್ರಯೋಜನವಾಗುತ್ತಾ ಇದೆ, ಯಾವ ರೀತಿಯ ವಿದ್ಯಾಭ್ಯಾಸವನ್ನು ನಾವು ಕೊಡುತ್ತಾ ಇದ್ದೇವೆ, ಇದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡತಕ್ಕಂಥಾದ್ದು ಬಹಳ ಒಳ್ಳೆಯದೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದರ ಬಗ್ಗೆ ಸಮಗ್ರವಾದ ಒಂದು ಚಿಂತನೆಯಾಗಬೇಕಾಗಿದೆ. ನಾವು ಈ ಕ್ಷೇತ್ರದಲ್ಲಿ ಯೂನಿವರ್ಸಿಟಿಗಳನ್ನು ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೇವೆಯೇ ವಿನಃ ಬೇಸಿಕ್ ಆಗಿ ಪ್ರಾಥಮಿಕ ಹಂತದಿಂದ ಯಾವ ರೀತಿಯ ವಿದ್ಯಾಭ್ಯಾಸ ಇರಬೇಕೆಂಬ ಬಗ್ಗೆ ನಾವುಗಳು ಯೋಚನೆ ಮಾಡುತ್ತಿಲ್ಲ ಎಂದು ಅನ್ನಿಸುತ್ತದೆ. ಆ ಬಗ್ಗೆ ನಮ್ಮ ಯೋಜನೆಯು ಕೂಡ ಇಲ್ಲವೆಂದು ಕಾಣುತ್ತದೆ. ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಿದ್ದರೂ ಕೂಡ ಇಲ್ಲವೆಂದು ಕಾಣುತ್ತದೆ. ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಿದ್ದರೂ ಕೂಡ ಇವೊತ್ತು ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲ್‌ಗಳ ಗತಿ ಏನಾಗಿದೆ? ಈ ದಿಸೆಯಲ್ಲಿ ನಾವು ಹಣವನ್ನು ಖರ್ಚು ಮಾಡತಕ್ಕಂಥ ಸಂದರ್ಭದಲ್ಲಿ ಸೂಕ್ತವಾದ ಯೋಜನೆಯನ್ನು ಮಾಡಿ, ಉಚಿತಮಾರ್ಗವನ್ನು ಹಾಕಿಕೊಂಡರೆ ಅದರಿಂದ ಪ್ರಯೋಜನವಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ದೇಶಪಾಂಡೆಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಸೋಶಿಯಲ್ ವೆಲ್‌ಫೇರ್‌ಗೆ ಕಡಿಮೆ ಕೊಟ್ಟಿದ್ದೀರಿ, ಬಡವರಿಗೆ ಕಡಿಮೆ ಕೊಟ್ಟಿದ್ದೀರಿ, ಬೇರೆ ಕೆಲವು ವಿಚಾರಗಳಿಗೆ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಅವರ ಚಿಂತನೆಯು ಬಹಳ ಒಳ್ಳೆಯದಾಗಿದ್ದರೂ ಕೂಡ ನಾವು ಮೂಲಭೂತವಾಗಿ, ನಾನು ಮೊದಲು ಹೇಳಿದ ಹಾಗೆ, ಇರಿಗೇಶನ್, ಹೆಲ್ತ್, ಎಜುಕೇಶನ್, ಇಲೆಕ್ಟ್ರಿಸಿಟಿ, ಮತ್ತು ಕಮ್ಯೂನಿಕೇಶನ್ - ಈ ಐದು ಭಾಗಗಳಿಗೆ ಹೆಚ್ಚು ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ನಮ್ಮಲ್ಲಿರತಕ್ಕಂಥ ಸಂಪನ್ಮೂಲಗಳ ಆಧಾರದ ಮೇಲೆ ಮಾಡುವುದು ಎಲ್ಲರ ಕರ್ತವ್ಯ, ಆ ಒಂದು ಕೆಲಸ ಇದರಲ್ಲಿ ಆಗಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸೋಶಿಯಲ್ ವೆಲ್‌ಫೇರ್ ಮತ್ತು ರೂರಲ್ ಡೆವಲಪ್‌ಮೆಂಟ್‌ಗೂ ಕೂಡ ಸಾಕಷ್ಟು ಹಣವನ್ನು ನಾವು ಕೊಟ್ಟಿದ್ದೇವೆ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಬಡವರು ಮತ್ತು ಮಧ್ಯಮವರ್ಗದವರು ಜಾಸ್ತಿ ಇರುವುದರಿಂದ ನಾವು ಎಷ್ಟು ಮಾಡಿದರೂ ಕೂಡ ಅದು ಕಡಿಮೆಯೇ ಆಗುತ್ತದೆ. ಈ ಬಗ್ಗೆ ನಮ್ಮ ಸರ್ಕಾರ ಚಿಂತನೆ ಮಾಡಿದೆ. ಮೊದಲನೇಯ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾದಾಗಿನಿಂದ ಇದರ ಬಗ್ಗೆ ಚಿಂತನೆ ನಡೆದಿದೆ ಮತ್ತು ಈ ಕುರಿತು ಸಾಕಷ್ಟು ಕೆಲಸಗಳು ಆಗಿವೆ ಎನ್ನುವ ಬಗ್ಗೆ ನಾವೆಲ್ಲರೂ ಕೂಡ ಒಪ್ಪಿಕೊಬೇಕಾಗುತ್ತದೆ. ಇವೊತ್ತು ಇರತಕ್ಕಂಥ ಬಿಸಿ, ಬಿಟಿ, ಎಸಿ, ಎಸ್‌ಟಿ, ಹಾಸ್ಟೆಲ್ಸ್ ಅವರುಗಳಿಗೆ ಕೊಡತಕ್ಕಂಥ ಎಜುಕೇಶನ್ ಸೌಲಭ್ಯಗಳು, ಇತ್ಯಾದಿಗಳನ್ನು ನೋಡಬೇಕು. ಆಗ ಒಂದು ತಾಲ್ಲೂಕಿಗೆ ಒಂದು ಹೈಸ್ಕೂಲ್ ಇರಲಿಲ್ಲ. ಇವೊತ್ತು ಒಂದು ತಾಲ್ಲೂಕಿಗೆ 20 ಹೈಸ್ಕೂಲ್‌ಗಳವರೆಗೆ ಇದೆ. ಪಿ.ಯು.ಸಿ ವಿದ್ಯಾಭ್ಯಾಸದ ಸೌಲಭ್ಯಗಳು ಸಾಕಷ್ಟು ಇದೆ. ನಮ್ಮ ತಾಲ್ಲೂಕಿನಲ್ಲಿಯೇ ಫಸ್ಟ್‌ಗ್ರೇಡ್ ಕಾಲೇಜ್‌ನಿಂದ ಹಿಡಿದು ಎಲ್ಲಾ ಟೆಕ್ನಿಕಲ್ ವಿದ್ಯಾಭ್ಯಾಸದ ಸೌಲಭ್ಯವೂ ಇರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿಯು ಟಿಸಿಎಚ್, ಮತ್ತಿತರ ಎಲ್ಲಾ ವಿದ್ಯಾಭ್ಯಾಸ ಸೌಲಭ್ಯಗಳು ಇವೆ. ನಾವು ನಮ್ಮಲ್ಲಿ ಏನೂ ಆಗಿಲ್ಲ ಎಂದು ಹೇಳುವ ಮನೋಭಾವನೆಯನ್ನು ಹೊಂದಿದ್ದೇವೆಯೇ ಹೊರತು, ನಮ್ಮಲ್ಲಿ ಸಾಕಷ್ಟು ಕೆಲಸಕಾರ್ಯಗಳು ಆಗಿವೆ, ಆದರೆ ನಾವು ಎಣಿಸಿದಷ್ಟು ಆಗಿಲ್ಲ ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಹಾಗಾದರೆ ಎಷ್ಟು ಕೆಲಸಕಾರ್ಯಗಳು ಆಗಬೇಕಾಗಿತ್ತು? 18,19,20ನೇ ಶತಮಾನಗಳನ್ನು ಅವಲೋಕಿಸಿದಾಗ, ಆಗ ಪಾಶ್ಚಿಮಾತ್ಯ ದೇಶಗಳನ್ನು ತೆಗೆದು ಕೊಂಡರೆ, ಅಮೇರಿಕಾ ದೇಶವನ್ನು ಉದಾಹರಿಸುವುದಾದರೆ, ಅವರಿಗೆ 200

ವರ್ಷಗಳಾದುವು. ಅವರು ಈ ದೀರ್ಘ ಅವಧಿಯಲ್ಲಿ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡಿದ್ದಾರೆಯೇ? How was the clinton election compaign, How many difficulties he has expressed in united states.

ಇವತ್ತಿನ ಅವರ ಎಕಾನಮಿ ಪಾಲಸಿಯನ್ನು ಏತಕ್ಕೆ ಕ್ಲಿಂಟನ್ ಚೇಂಜ್ ಮಾಡಿದ್ದಾರೆ? ಇಷ್ಟೊಂದು ಬಡತನ ಇದ್ದ ದೇಶದಲ್ಲಿ ಎಲ್ಲಾ ಆಗಿಲ್ಲ ಎನ್ನುವ ಮಾತು ಹೇಳುವುದು ಸರಿಯಲ್ಲ ಎಂದು ಹೇಳುತ್ತೇವೆ. 1947ರಿಂದೀಚೆಗೆ ತಪ್ಪಾಗಿದ್ದರೆ ಅದಕ್ಕೆ ವಿದ್ಯಾವಂತರುಗಳೇ ಕಾರಣ ಎಂಬುದನ್ನೂ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಏತಕ್ಕೆಂದರೆ ಬಡತನದಿಂದ ತೊಳಲುತ್ತಿದ್ದ ಈ ದೇಶದಲ್ಲಿ ವಿದ್ಯಾವಂತರು ಎಲ್ಲ ಫೀಲ್ಡ್‌ನಲ್ಲೂ ಅಧಿಕಾರವನ್ನು ಹಿಡಿದ ಮೇಲೆ ಅವರವರ ಜವಾಬ್ದಾರಿಯನ್ನು ಅರಿತುಕೊಳ್ಳದೆಯೇ ಕೆಲಸ ಮಾಡಿರುವುದೇ ಇಲ್ಲಿನ ದೊಡ್ಡ ಪೆಟ್ಟು. ಇದನ್ನು ನಾವೆಲ್ಲ ಒಪ್ಪಿಕೊಂಡು ಸಮವಾಗಿ ಹಂಚಿಕೊಳ್ಳಬೇಕಾಗುತ್ತದೆ. ಈ ದೇಶದಲ್ಲಿ ಏನೂ ಅಭಿವೃದ್ಧಿಯಾಗಿಲ್ಲ ಎಂದು ಯಾರಾದರೂ ಹೇಳಿದರೆ ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏನೂ ಅಭಿವೃದ್ಧಿಯಾಗಿಲ್ಲ ಅಂದರೆ ಅದು ದೇಶದ್ರೋಹ ಮಾಡಿದಂತಾಗುತ್ತದೆ. ಏಕೆಂದರೆ We have achieved something. ಪ್ರಪಂಚದ ರಾಷ್ಟ್ರಗಳಲ್ಲಿ ತಲೆಎತ್ತಿ ನಿಲ್ಲುವ ಕೆಲಸವನ್ನು ಪಂಡಿತ್ ಜವಹರ್‌ಲಾಲ್ ನೆಹರೂ, ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ನಾವು ಸಾಧಿಸಿದ್ದೇವೆ ಎನ್ನುವುದನ್ನು ಯಾರೂ ಅಲ್ಲಗೆಳೆಯಲಾಗುವುದಿಲ್ಲ. ಈಗ ಇಲ್ಲಿ ತಂದಿರುವ ನಮ್ಮ ಆಯವ್ಯಯ ಏನಿದೆ ಇದರಲ್ಲಿ ಬಹಳ ಮುಖ್ಯವಾಗಿ ಬೇಕಾಗಿರುವ ಪಂಚಾಯತ್‌ರಾಜ್‌ಗೆ, ನೀರಾವರಿಗೆ, ವಿದ್ಯುತ್‌ಗೆ ಮತ್ತು ಸಮಾಜ ಕಲ್ಯಾಣಕ್ಕೆ ಸಾಕಷ್ಟು ಹಣ ಇದರಲ್ಲಿ ಕೊಡಲಾಗಿದೆ. ರಿಸೋರ್ಸ್ ಮೊಬಿಲೈಜೇಶನ್ ಬಗ್ಗೆ ಮುಖ್ಯಮಂತ್ರಿ ಗಳು ಏನು ಆಶಾದಾಯಕ ಬಜೆಟ್ ಇಟ್ಟಿದ್ದಾರೆ, ಮತ್ತು ಒಳ್ಳೆಯ ಸರ್ಕಾರ ಕೊಡಬೇಕು, ಒಳ್ಳೆಯ ಹೆಸರು ಪಡೆಯಬೇಕೆಂದು ಅವರೇನು ಮನಸಿನಲ್ಲಿಟ್ಟುಕೊಂಡಿದ್ದಾರೋ ಅದಕ್ಕೆ ಪ್ರಯತ್ನಮಾಡಿ ಈ ಬಜೆಟ್ ಮಂಡನೆ ಮೂಲಕ ಈ ವರ್ಷದಲ್ಲಿ ನಾವು ಅವರ ತುಟ್ಟತುದಿ ಮುಟ್ಟಲು ಪ್ರಯತ್ನಮಾಡಿದರೆ ನಿಜವಾಗಿಯೂ ಈ ಬಜೆಟ್ ಬಹಳ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

* ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ನನ್ನ ಮಾತನ್ನು ಶುರು ಮಾಡುವ ಮೊದಲು ಈಗತಾನೇ ಮಾತನಾಡಿದ ಡಾ॥ ನಂಜಪ್ಪನವರು ಒಂದು ಮಾತು ಹೇಳಿದರು . 1989 ರಿಂದ ಹಿಂದಕ್ಕೆ ಈ ರಾಜ್ಯದ ಆಡಳಿತ ಜವಾಬ್ದಾರಿ ಹೊತ್ತಿದ್ದ ಜನ 1500 ಕೋಟಿ ಸಾವನ್ನು ನಮಗೆ ಬಿಟ್ಟು ಪಲಾಯನ ಮಾಡಿದರು ಎಂದು. ಇದರರ್ಥ ನಾನು ತಿಳಿದು ಕೊಂಡಿದ್ದುದು ಸರಿ ಆದರೆ ಅವರ ಮುಖ್ಯಮಂತ್ರಿಗಳು ಕೊಟ್ಟಿರುವ ಬಜೆಟಿನ 10ನೇ ಕಾಲವನ್ನು ಓದಿದರೆ ಆವತ್ತಿನ ಸಾಲ 1500 ಕೋಟಿ ಹೆಚ್ಚೆ ಅಥವಾ ಇವತ್ತು ಮೂರು ವರ್ಷವಾದ ಮೇಲೆ ಅವರು ಬಿಟ್ಟಿರುವ ಸಾಲ ಹೆಚ್ಚೇ ಎನ್ನುವುದು ಅವರಿಗೇ ಅರಿವಾಗುತ್ತದೆ. ನಾನು ಲೆಕ್ಕಾಚಾರ ಮಾಡಿದೆ, ಅದನ್ನು ಮುಖ್ಯಮಂತ್ರಿಗಳು ಕೂಡ ಒಪ್ಪಿಕೊಂಡಿದ್ದರೆ, 1980-81 ರಿಂದ 92-93ರವರೆಗೆ ಒಟ್ಟು ಸಾಲದ ಮೊತ್ತ 3154 ಕೋಟಿ. ಆದರಿಂದ 1500 ರೂ ಸಾಲ ಬಿಟ್ಟು ಇವರು ಪಾಲಾಯನ ಮಾಡಿದರು ಎಂದು ಅವರು ಹೇಳಿದ್ದರಿಂದ ನಾನೂ ಸ್ವಲ್ಪ ಆ ಆಡಳಿತದಲ್ಲಿ ಭಾಗಸ್ಥನಾಗಿರುವುದರಿಂದ ಅದಕ್ಕೆ ನಾನು ಉತ್ತರ ಕೊಡಬೇಕಾಗಿ ಬಂತು,

5.30 ಪಿ.ಎಂ.

ಅಕಸ್ಮಾತ್ ಆ ಫಿಗರ್ಸ್ ಸರಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 1500 ಕೋಟಿ

ಇದ್ದಿದ್ದರೆ, ಇವತ್ತು ಈ ರಾಜ್ಯದ ಮೇಲೆ ಇರುವಂಥ ಸಾಲದ ಮೊತ್ತ 3154 ಕೋಟಿರೂಪಾಯಿ. ಅದನ್ನು ಅವರ ಗಮನಕ್ಕೆ ತರುವುದಕ್ಕೆ ತಮ್ಮ ಮುಖಾಂತರ ಇಷ್ಟಪಡುತ್ತೇನೆ. 5.30 ಪಿ. ಎಂ.

ಶ್ರೀ ಹೆಚ್. ಏಕಾಂತಯ್ಯ : ಕೇಂದ್ರ ಸರ್ಕಾರದ ಸಾಲವನ್ನೂ ಹೇಳಿ ಬಿಡಿ. ಕೇಂದ್ರಸರ್ಕಾರದಲ್ಲಿ ವಿದೇಶಿ ಸಾಲ 1 ಲಕ್ಷದ 70 ಸಾವಿರ ಕೋಟಿ ಇದೆ. ಬರೀ ಬಡ್ಡಿ 38 ಸಾವಿರ ಕೋಟಿ ಒಂದು ವರ್ಷಕ್ಕೆ ಕೊಡಬೇಕಾಗಿದೆ.

ಡಾ॥ ಎನ್. ಬಿ. ನಂಜಪ್ಪ : ಮಾನ್ಯ ಅಧ್ಯಕ್ಷರೇ , ಮಾಸ್ಟರಿಗೆ ಸಂಬಳ ಕೊಡುವುದಕ್ಕೆ , ಕಂಟ್ರಾಕ್ಟರ್ ಕೆಲಸ ಮಾಡಿದ್ದರಲ್ಲಾ , ಬಿಲ್‌ಗಳೂ ಆ ಬಿಲ್ ಕೊಡತಕ್ಕಂಥದ್ದು, ಪೆನ್ಸನ್ ಅದರ ಸಾಲ ಹೇಳಿದನೇ ಹೊರತು ನಾನು ಈ ಸಾಲವನ್ನು ಹೇಳಲಿಲ್ಲ . ರಾಮಯ್ಯನವರು ಹೇಳಿದ ಸಾಲವನ್ನು ಹೇಳಲಿಲ್ಲ. ಅದು ನನಗೆ ಗೊತ್ತಿದೆ, ಯಾವುದೇ ಸರ್ಕಾರ ಸಾಲ ಇಲ್ಲದೇ ಹೋದರೆ ಅದು ದೇಶವೇ ಅಲ್ಲ. ಅಮೇರಿಕಾ ಕೂಡ ಸಾಲ ಮಾಡಿದೆ.

ಶ್ರೀ ವೈ. ಕೆ. ರಾಮಯ್ಯ : ಅವರ ವಾದ ಅದು, ಆದರೆ ನಾನು ಕಳೆದ ಒಂದು ವಾರದಿಂದ ಸತತವಾಗಿ ಈ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಉತ್ತರ ಬರುತ್ತಿಲ್ಲ.ಆ ಪ್ರಾರ್ಥನೆ ಮುಂದೆ ಆಗಬೇಕಾದ ವಿವಿಧ ಯೋಜನೆಗಳಿಗೆ ಕೊಡಬೇಕಾಗಿರುವಂಥ ಮೊತ್ತದ ಮೊಬಲಗು ಎಷ್ಟು? ನನಗೆ ಇರುವಂಥ ಮಾಹಿತಿ ಪ್ರಕಾರ 50 ಕೋಟಿ ಕೊಡಬೇಕು. ಪಿ.ಡಬ್ಲ್ಯೂಡಿಯಲ್ಲಿ ಅಪ್ರಾಕ್ಸಿಮೇಟ್ ಸುಮಾರು 10 ಕೋಟಿ ಕೊಡಬೇಕು. ಇದನ್ನೆಲ್ಲಾ ಲೆಕ್ಕ ಹಾಕಿಕೊಂಡರೆ ಸರ್ಕಾರದವರು ಅಂಕಿಅಂಶ ಕೊಟ್ಟರೆ 150 ಕೋಟಿ ಅಥವಾ 200 ಕೋಟಿಯಾಗುತ್ತದೆಯೋ ಎಂದು ಅವರು ಲೆಕ್ಕ ಕೊಟ್ಟರೆ ಸಂತೋಷ. ಏಕೆಂದರೆ ಆ ಲೆಕ್ಕ ನನ್ನ ಹತ್ತಿರ ಇಲ್ಲ. ನಾವಂತೂ 1500 ಕೋಟಿ ಬಿಟ್ಟು ಹೋಗಿದ್ದೆವು. ಅದನ್ನು ಲೆಕ್ಕ ಕೊಟ್ಟರೆ ಅನುಕೂಲವಾಗುತ್ತದೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು 1993-94 ಕ್ಕೆ ಈ ರಾಜ್ಯದ ಖರ್ಚು ಆದಾಯ ಹೇಗೆ ನಡೆಯಬೇಕು ಎನ್ನುವಂಥ ಆಯವ್ಯಯವನ್ನು ಮಂಡಿಸಿದ್ದಾರೆ. ಒಂದು ರಾಷ್ಟ್ರದ ಅಥವಾ ಒಂದು ರಾಜ್ಯದ ಆಯವ್ಯಯ ಹೇಗೆ ಇರಬೇಕು, ಯಾವುದು ಅತ್ಯಂತ ಉತ್ತಮವಾದ ಆಯವ್ಯಯ, ಎನ್ನುವ ಪ್ರಶ್ನೆ ಬಂದಾಗ, ಒಂದು ಕಾಲ ಇತ್ತು, ತಮಗೆ ಅದರ ಅರಿವಿಲ್ಲ. ಈ ದೇಶದಲ್ಲಿ ಅಥವಾ ಒಂದು ಸಮುದಾಯದಲ್ಲಿ ತೆರಿಗೆಯನ್ನು ವಸೂಲಿ ಮಾಡುತ್ತಿದ್ದುದು ಆವತ್ತಿನ ರಾಜಮನೆತನದ ರಾಣಿ ನಿವಾಸದ ಖರ್ಚಿಗೆ, ಕುದುರೆ ಸಾಕುವುದಕ್ಕೆ ಮತ್ತು ಅವರ ಮೇಜವಾನಿಗೆ ಸೀಮಿತವಾಗಿತ್ತು. ಆದರೆ ಆಧುನಿಕ ದೇಶಗಳ ಆದಾಯವಾಗಲಿ, ವೆಚ್ಚವಾಗಲಿ ಅಷ್ಟಕ್ಕೆ ಸೀಮಿತವಾಗಿ ಇರಲಿಕ್ಕೆ ಸಾಧ್ಯವಿಲ್ಲ. ಆಧುನಿಕ ಅದರಲ್ಲೂ ಪ್ರಜಾಪ್ರಭುತ್ವ ರಾಷ್ಟ್ರಗಳ ಆಯವ್ಯಯ ಅತ್ಯಂತ ವಿಭಿನ್ನವಾದುದು ಮತ್ತು ಅತ್ಯಂತ ಆಧುನಿಕ ಸ್ವರೂಪವನ್ನು ಪಡೆದಂಥದ್ದು. ಇದೆಲ್ಲದಕ್ಕಿಂತ ಹೆಚ್ಚಾಗಿ ಬಹಳ ಸಂಕೀರ್ಣವಾದುದು. ಏತಕ್ಕೆ ಈ ಆಯವ್ಯಯ ಅತ್ಯಂತ ಸಂಕೀರ್ಣವಾದ ವಿಷಯ ಎಂದರೆ ಯಾವ ಆಯವ್ಯಯದಲ್ಲಿ ತೆರಿಗೆ ಇರುವುದಿಲ್ಲವೋ ಆ ಆಯವ್ಯಯ ಅತ್ಯಂತ ಉತ್ತಮವಾದುದು ಎಂದು ಒಂದು ವಾದ. ಆದರೆ ತೆರಿಗೆಯೇ ಇಲ್ಲದೆ ಸರ್ಕಾರ ನಡೆಯುವುದಿಲ್ಲ. ಆದ್ದರಿಂದ ನನ್ನ ಪ್ರಕಾರ ಇದನ್ನು ನಾವು ಸ್ವಲ್ಪ ಪರೀಕ್ಷೆಗೆ ಸ್ವಲ್ಪ ಓದಿಕೊಂಡಿದ್ದುದು, ಇತ್ತೀಚೆಗೆ ನನಗೆ ಗೊತ್ತಿಲ್ಲ. ಯಾವ ಆಯವ್ಯಯದಲ್ಲಿ ಕಡಿಮೆ ತೆರಿಗೆ ಹಾಕಿ ಬಂದಂಥ ಆದಾಯದಲ್ಲಿ ಹೆಚ್ಚಿನ ಭಾಗವನ್ನು ಅಭಿವೃದ್ಧಿ ಕೆಲಸಗಳಿಗೆ ತೊಡಗಿಸುತ್ತಾರೋ I think that is the best budget. The budget, which earmarks more money for the developmental works out of the income of the State and lessening the non-plan expenditure, is the best budget. ಇದು ಒಂದು ಆದರ್ಶವಾದ

ಆಯವ್ಯಯವೆಂದು ಹೇಳದಿದ್ದರೂ ಕೂಡ ಸಹಜವಾದ ಆಯವ್ಯಯವೆಂದು ನಾನು ಭಾವಿಸುತ್ತೇನೆ. ಮೊಟ್ಟಮೊದಲಿಗೆ ಒಂದು ಮಾತು ಹೇಳುತ್ತೇನೆ. ಈ ಆಯವ್ಯಯವನ್ನು ತಯಾರು ಮಾಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಎಷ್ಟು ಕಸರತ್ತು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಇದು ಸಹಜತೆಗಿಂತ ಸ್ವಲ್ಪ ದೂರ ಇದೆ. ಕೇಂದ್ರದ ಆಯವ್ಯಯ ಬಿಡಿ. ಕೇಂದ್ರದ ಆಯವ್ಯಯವನ್ನು ನೋಡಿದರೆ ಬಹುಶಃ ಲೋಕಸಭೆಯ ಚುನಾವಣೆಗಳಲ್ಲಿ ಕೂಡ ಕಾಣುತ್ತದೆ. ತೆರಿಗೆ ಹಾಕದೆ ಇರುವಂತಹ ಆಯವ್ಯಯವನ್ನು ರಾಷ್ಟ್ರಮಟ್ಟದಲ್ಲಿ ನೋಡಿದಾಗ ನನಗಂತೂ ಅನಿಸುತ್ತದೆ. ರಾಜ್ಯ ಮಟ್ಟದಲ್ಲಿ ನಾವು ಸೀಮಿತವಾಗಿರಬೇಕು ಎಂದರೆ ಸನ್ಮಾನ್ಯ ಅಧ್ಯಕ್ಷರೆ, ಈ ಸಧ್ಯದಲ್ಲಿ ನಾವು ಕೈಗೊಂಡ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ಯೋಜನಾ ವೆಚ್ಚ 12,300 ಕೋಟಿ ರೂಪಾಯಿಗಳು. 18 ಕೋಟಿ ರೂಪಾಯಿ ಅಲ್ಲ. ಯೋಜನಾ ಮಂತ್ರಿಗಳು ದಯಮಾಡಿ ತಿದ್ದಿಕೊಳ್ಳಬೇಕು, 12,300 ಕೋಟಿ ರೂಪಾಯಿಗಳೆಂದು. ಈ 12,300 ಕೋಟಿ ರೂಪಾಯಿನಲ್ಲಿ 1992-93ರಲ್ಲಿ ನಾವು ಈಗಾಗಲೇ 1915 ಕೋಟಿ ರೂಪಾಯಿಗಳ ವೆಚ್ಚವನ್ನು ನಿರ್ವಹಣೆ ಮಾಡಿದ್ದೇವೆ. ಅದು ರಿವೈಸ್ ಆಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಗಮನಕ್ಕೆ ಈಗಾಗಲೇ ತಂದಿದ್ದಾರೆ. ಇದು ಆದ ಮೇಲೆ ಈ ವರ್ಷ ನಾವು ಮೂರು ಸಾವಿರ ಕೋಟಿ ರೂಪಾಯಿಗಳ ಅಂದಾಜನ್ನು ಸದನದ ಮುಂದೆ ಇಟ್ಟಿದ್ದೇವೆ. ಅಲ್ಲಿಗೆ ನನ್ನ ಲೆಕ್ಕಾಚಾರದ ಪ್ರಕಾರ 4,940 ಕೋಟಿ ರೂಪಾಯಿಗಳು ಈ ಎರಡು ವರ್ಷದಲ್ಲಿ ನಾವು ವ್ಯಯ ಮಾಡಿದ್ದೇವೆ. ಯೋಜನಾ ಮಂತ್ರಿಗಳು ಹೊರಟು ಹೋಗುತ್ತಿದ್ದಾರೆ. ಸರ್ಕಾರದ ಪರವಾಗಿ ಅವರನ್ನು ಕೇಳೋಣ ಎಂದು ಇದ್ದೆ. 12,300 ಕೋಟಿ ರೂಪಾಯಿಗಳು ಈ ರಾಜ್ಯದ ಎಂಟನೇ ಪಂಚವಾರ್ಷಿಕ ಯೋಜನೆಗಳಿಗೆ ಖರ್ಚು ಮಾಡಲಿಕ್ಕೆ ಯೋಜನಾ ಆಯೋಗವು ನಿಗದಿ ಪಡಿಸಿರುವಂಥ ಒಂದು ವೆಚ್ಚ. ಅದು ನಾನು ಪರಿಮಾಣದಲ್ಲಿ ಹೇಳುತ್ತಿದ್ದೇನೆ. ಈ ಹಣದಲ್ಲಿ ಈಗಾಗಲೇ ಕಳೆದ ವರ್ಷ 1900 ಕೋಟಿ, 3025 ಕೋಟಿ ಈ ವರ್ಷ ನಾವು ಖರ್ಚು ಮಾಡುವಂತಹ ಒಂದು ಅಂದಾಜನ್ನು ಇಟ್ಟುಕೊಂಡಿದ್ದೇವೆ. ಈ ಎರಡು ವರ್ಷಗಳಲ್ಲಿ 4940 ಕೋಟಿ ರೂಪಾಯಿಗಳು ವ್ಯಯ ಆಗಿ ಹೋಗುತ್ತದೆ. ಇನ್ನು ನಮಗೆ ಉಳಿಯುವುದು 7340 ಕೋಟಿ ರೂಪಾಯಿಗಳು. ನಾನು ಇದನ್ನು ಹೇಳುತ್ತಿದ್ದೇನೆಂದರೆ 12,300 ಕೋಟಿ ರೂಪಾಯಿನಲ್ಲಿ 4940 ಕೋಟಿ ರೂಪಾಯಿಯನ್ನು ಕಳೆದರೆ ನಮಗೆ ಉಳಿದುಕೊಳ್ಳುವುದು ಕೇವಲ 7,360 ಕೋಟಿ ರೂಪಾಯಿ. ಈ 7,360 ಕೋಟಿ ಹಣವನ್ನು ಮೂರು ವರ್ಷಕ್ಕೆ ಹಂಚಿದರೆ ಬಹುಶಃ ಮೂರು ಸಾವಿರಕ್ಕಿಂತ ಕಡಿಮೆ ಆಗುತ್ತದೆ. ನಾನು ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನೀವು ಹೇಗೆ ಸರಿದೂಗಿಸುತ್ತೀರಿ? ಯೋಜನಾ ಮಂತ್ರಿಗಳು ಹೊರಟೇ ಹೋದರು ಏನು ಮಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಿಗರ್ಸ್ ತರುವುದಕ್ಕೆ ಹೋದರು.

ಶ್ರೀ ವೈ.ಕೆ. ರಾಮಯ್ಯ : ಯಾವ ಫಿಗರ್ಸ್ ತರುವುದಕ್ಕೆ ಹೋದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು 12,000 ಎಂದಿರಿ, ಅವರು 18 ಸಾವಿರ ಎಂದರು. ಆಮೇಲೆ ಇರುವ ವ್ಯತ್ಯಾಸ ಇರುವುದನ್ನು ತರುವುದಕ್ಕೆ ಹೋದರು.

ಶ್ರೀ ವೈ. ಕೆ. ರಾಮಯ್ಯ : 8 ನೇ ಪಂಚವಾರ್ಷಿಕ ಯೋಜನೆಯ ಐದು ವರ್ಷದಲ್ಲಿ ಖರ್ಚು ಮಾಡಬೇಕಾಗಿರುವ 12,300 ಕೋಟಿ ರೂಪಾಯಿಗಳಲ್ಲಿ 4,940 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ ಮೇಲೆ ನಮಗೆ ಉಳಿಯುವಂತಹದು 7360 ಕೋಟಿ ರೂಪಾಯಿಗಳು. ಈ 7360 ಕೋಟಿ ರೂಪಾಯಿಗಳನ್ನು ಮೂರು ವರ್ಷಕ್ಕೆ ಹಂಚಿದರೆ ಬಹುಶಃ ಎರಡು ಸಾವಿರ ಚಿಲ್ಲರೆ ಕೋಟಿ ಬರುತ್ತದೆ. ಅಂದರೆ ಈ ವರ್ಷ ಮೂರು ಸಾವಿರ ಚಿಲ್ಲರೆ

ಕೋಟಿಯಷ್ಟು ಖರ್ಚು ಮಾಡಿರುವ ಈ ರಾಜ್ಯ ಸರ್ಕಾರಕ್ಕೆ ಈ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ಉಳಿದಿರುವಂತಹ ಮೂರು ವರ್ಷದಲ್ಲಿ ಈ ವರ್ಷ ಖರ್ಚು ಮಾಡಿದಷ್ಟು ಹಣವೂ ಕೂಡ ದೊರೆಯುವುದಿಲ್ಲ. ಅದಕ್ಕೆ ಯೋಜನಾ ಆಯೋಗದವರ ಸಮ್ಮತಿ ಕೂಡ ದೊರೆಯಲಾರದು ಎನ್ನುವುದು ನನ್ನ ಭಾವನೆಯಾಗಿದೆ. ಸರ್ಕಾರ ಹೇಗೆ ಇದನ್ನು ಸರಿದೂಗಿಸಿಕೊಂಡು ಹೋಗುತ್ತದೆ ಎನ್ನುವುದನ್ನು ನಾನು ಅವರಲ್ಲಿ ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ನನಗೆ ಎಕ್ಸ್‌ಪ್ಲನೇಷನ್ ಬೇಕಾಗಿದೆ. ಪಂಚವಾರ್ಷಿಕ ಯೋಜನೆಗಳು ಅನುಷ್ಠಾನವಾದ ಮೇಲೆ ಈ ರಾಜ್ಯವನ್ನು ಪ್ರಗತಿಶೀಲ ರಾಜ್ಯವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತಾರೆ. ಹೇಗೆ ಇದನ್ನು ಪ್ರಗತಿಶೀಲವಾದಂತಹ ರಾಜ್ಯ ಎಂದು ಹೇಳಿದರು ನನಗೆ ಗೊತ್ತಿಲ್ಲ. ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಈ ರಾಜ್ಯದ ಪಾತ್ರ ಏನು? ಸ್ಥಾನ ಏನು? ಪ್ರಗತಿಶೀಲವಾಗಿ ನಿಜವಾಗಿಯೂ ಇದೆಯೇ ಅನ್ನುವುದನ್ನು ನಾವು ಪರಿಶೀಲನೆ ಮಾಡಿದಾಗ ನಿಮಗೆ ಸ್ವಲ್ಪ ಕಳಕಳಿ ಇರುವುದರಿಂದ ಇದು ಅರ್ಥವಾಗುತ್ತದೆ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖರ್ಚು ಮಾಡಿದಂತಹ ಹಣ 5.5. ಇಡೀ ರಾಷ್ಟ್ರದ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖರ್ಚು ಮಾಡಿದಂತಹ ಹಣ5.5. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖರ್ಚು ಮಾಡಿದಂತಹ ಪ್ರಮಾಣ 4.8, ದರ ಅಲ್ಲ. ಇನ್ನು 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1985-90ರವರೆಗೆ ಈ ರಾಜ್ಯದಲ್ಲಿ ಇನ್ನೂ ಕುಸಿತವಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬೇರೆ ರಾಜ್ಯಗಳದ್ದೆ ಮೇಲಕ್ಕೆ ಹೋದರೆ, ನಮ್ಮದು ಇನ್ನು ಕುಸಿತ ಎಷ್ಟು ಅಂದರೆ 4.4. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 12,300. ಈ ಅಂಕಿಅಂಶಗಳನ್ನು ನೋಡಿದಾಗ ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಪ್ರಗತಿಶೀಲವಾಗಿದೆ, ಉತ್ತಮವಾಗಿದೆ, ಸಾಧನೆ ಏನೂ ಆಗಿಲ್ಲವೆಂದು ನಾವು ಯಾರು ಹೇಳುವುದಿಲ್ಲ. ಈ ರಾಷ್ಟ್ರದಲ್ಲಿ ಅತ್ಯಂತ ದೊಡ್ಡ ಸಾಧನೆಯಾಗಿದೆ, ಸಾಧನೆ ಆಗಿಲ್ಲವೆಂದು ಹೇಳುವಷ್ಟು ನಾವು ಮೂರ್ಖರಲ್ಲ. ಆದರೆ ಯಾವುದರಲ್ಲಿ ಸಾಧನೆ ಆಗಬೇಕಾಗಿತ್ತೋ ಅದರಲ್ಲಿ ಸಾಧನೆ ಆಗಿಲ್ಲ. ಎಷ್ಟು ಸಾಧನೆ ಆಗಬೇಕಾಗಿತ್ತೋ ಅಷ್ಟು ಸಾಧನೆ ಆಗಿಲ್ಲ. ಅದು ನಮ್ಮ ತಕರಾರು. ರಾಷ್ಟ್ರದ ಎಲ್ಲಾ ರಾಜ್ಯಗಳಿಗೆ ಯೋಜನಾ ವೆಚ್ಚದ ಪರಿಮಾಣದ ಹಂಚಿಕೆಯ ಆಧಾರದ ಮೇಲೆ ಈ ರಾಜ್ಯ ಪ್ರಗತಿಶೀಲವಾದಂತಹ ರಾಜ್ಯ ಅಂತ ಕರೆಯಲಿಕ್ಕೆ ನಾನು ಸಿದ್ಧವಿಲ್ಲ. ಏಕೆಂದರೆ ಅದರ ವೆಚ್ಚ 4.4 ಕೋಟಿ. ಪರಿಮಾಣದ ದೃಷ್ಟಿಯಿಂದ ಈ ರಾಷ್ಟ್ರದ ಪಂಚವಾರ್ಷಿಕ ಯೋಜನೆಯ ಅನುಷ್ಠಾನದಲ್ಲಿ ರಾಜ್ಯಕ್ಕೆ ಸರಿಯೂದ ಪಾಲು ಸಿಕ್ಕಿಲ್ಲ, ಪ್ರಗತಿಶೀಲವಾಗಿಲ್ಲ ಎಂದು ಹೇಳಿದರೆ ಹೋಗಲಿ ದರದಲ್ಲಿಯಾದರೂ ಏನಾದರೂ ಹೆಚ್ಚಾಗಿದೆಯೂ ಇಲ್ಲ. ಯೋಜನಾ ದರದಲ್ಲಿಯೂ ಕೂಡ ಅತ್ಯಂತ ಹಿಂದೆ ಇದ್ದೇವೆ. ಏಕೆಂದರೆ ಈ ವರ್ಷ 1993-94ರ ಹೊರತು ಪಡಿಸಿದರೆ ದರದಲ್ಲಿ ಕೂಡ ನಾವು ತುಂಬಾ ಹಿಂದೆ ಇದ್ದೇವೆ. ಈ ದರದ ಹೆಚ್ಚಳ 1986-87 ರಲ್ಲಿ 17.51, 1987-88 ರಲ್ಲಿ 13.72, 1988-89ರಲ್ಲಿ ಅತ್ಯಂತ ಕುಸಿತವಾಗಿದೆ. 15.55 . 1991-92 10.90. ಈ ವರ್ಷ ಜಿಗಿಯುತ್ತಿದೆ. ಈ ಜಿಗಿತ ಒಳ್ಳೆಯದಲ್ಲ ಎಂದು ನನ್ನ ಭಾವನೆಯಾಗಿದೆ. 58 ಪರ್ಸೆಂಟಿನ ಯೋಜನಾ ವೆಚ್ಚದ ದರದ ಜಿಗಿತ ಇದು ಸಹಜವಾದುದು ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ಕರ್ನಾಟಕ ರಾಜ್ಯದ ಯೋಜನಾ ವೆಚ್ಚದ ದರದ ಹೆಚ್ಚಳದಲ್ಲಿ ಆಗಿರುವಂತಹ ಶೇಕಡವಾರು ಜಿಗಿತ 58 ಪರ್ಸೆಂಟ್. ಆದ್ದರಿಂದ ನಾನು ಮಾತನ್ನು ಶುರುಮಾಡಿದಾಗ ಈ ಆಯವ್ಯಯ ಸಹಜವಾದುದಲ್ಲ ಎಂದು ಹೇಳಿದೆ. ವಿರೋಧ ಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಹೇಳಿದಂತೆ, ಏನು ಈ ಯೋಜನಾ ವೆಚ್ಚದ ಅತಿ ಹೆಚ್ಚಿನ ಜಿಗಿತದ ದರದ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆ, ಇದು ಬಹುಶಃ ಈ ರಾಜ್ಯದ ಜನರಿಗೆ ಮಾಡುತ್ತಿರುವ ಮೋಸವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ನನ್ನ ವಾದಕ್ಕೆ ಪುಷ್ಟಿ ಏನೆಂದರೆ, ಯೋಜನಾ ವೆಚ್ಚದ ದರ ಕಳೆದ ಎರಡು ವರ್ಷಗಳ ಹಿಂದೆ ಹತ್ತು ಭಾಗ ಇದ್ದಾಗ ಕೂಡ ಯೋಜನೆಯಲ್ಲಿ ನಾವು ನಮೂದಿಸಿದ ಎಲ್ಲಾ ಹಣವನ್ನು ಖರ್ಚು

ಮಾಡುವುದಕ್ಕಾಗಲಿಲ್ಲ, ನಿಮ್ಮ ಸರ್ಕಾರಕ್ಕೂ ಖರ್ಚು ಮಾಡುವುದಕ್ಕಾಗಿಲ್ಲ. ನಾನು ಮಂತ್ರಿಯಾಗಿದ್ದಾಗ ಸರ್ಕಾರ ಅಷ್ಟು ಹಣವನ್ನು ಖರ್ಚುಮಾಡುವುದಕ್ಕಾಗುವುದಿಲ್ಲ. ಕೇವಲ 10 ಜಾಸ್ತಿ ಇದ್ದಾಗ ನಾನು ಹೇಳುತ್ತಿರುವುದು. How can I expect that this Government is going to spend 58% of increased hike. ಇದೇನು ಹುಡುಗಾಟವೆ? ತಮಾಷೆಯೆ? ಅಥವಾ ನಮಗೇನೂ ಅರ್ಥವಾಗುವುದಿಲ್ಲವೆಂದೆ? ಈ ಬಜೆಟ್‌ನಲ್ಲಿ ಯೋಜನಾದರ ಶೇಕಡಾ 50 ಜಾಸ್ತಿಯೂಗಿದೆ ಎಂದಾಗ I was astonished. ಅನೇಕ ಸಾರಿ ನಾನು ಆ ಸಂಖ್ಯೆಗಳನ್ನು ತಿರುಗಿ, ಮುಗುಚಿ ಓದಬೇಕಾಗಿ ಬಂದಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿರುವಂತೆ ರಿಸೋರ್ಸ್ ಮೊಬಲೈಸೇಷನ್ ಜಾಸ್ತಿಯಾದ ನಂತರ ಮತ್ತು ಇದನ್ನು ಒಪ್ಪಿಕೊಂಡು ರಿಸೋರ್ಸ್ ಮೊಬಲೈಸೇಷನ್ ಜಾಸ್ತಿ ಮಾಡಿ ಎಂದು ಯೋಜನಾ ಆಯೋಗದವರಿಗೆ ಮನವರಿಕೆ ಮಾಡಿಕೊಟ್ಟ ನಂತರ ಈ ಸಂಖ್ಯೆ ಬಂದರೆ ತಪ್ಪೇನಾಗುತ್ತದೆ? ನೀವು ಇದರ ಬಗ್ಗೆ ಮುಂದಿನ ವರ್ಷ ಕೇಳಬೇಕು. ಹೋದ ವರ್ಷ ನೀವು ಇಷ್ಟು ಹೇಳಿದ್ದೀರಿ, ಶೇಕಡ 58ರಷ್ಟು ಏರಿಸಿದರೂ ನೀವು ಕೂಡ ಖರ್ಚು ಮಾಡುವುದಕ್ಕಾಗಲಿಲ್ಲ, ಇದು ತಪ್ಪಿದೆ ಎಂದಾಗ ಒಪ್ಪಿಕೊಳ್ಳೋಣ. ಅದನ್ನು ಬಿಟ್ಟು ನೀವು ಈಗಲೇ ಭವಿಷ್ಯ ನುಡಿದರೆ ಅಷ್ಟು ಸರಿ ಎನಿಸುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಅವರು ಮಾಡಿರುವುದು ತಪ್ಪೆಂದು ನಾನು ಹೇಳುವುದಿಲ್ಲ. I never said it is wrong. ಅತ್ಯಂತ ಒಳ್ಳೆಯದೆಂದು ನಾನು ಹೇಳುತ್ತಿದ್ದೇನೆ. ಇದು ಸಾಧ್ಯವಿಲ್ಲ, ಮೋಸ ಹೋಗುತ್ತಿದ್ದೀರೆಂದು ಹೇಳುತ್ತಿದ್ದೇನೆ. ಇದು ಸರಿ ಹೋಗುತ್ತದೆಯೆ? ಇಲ್ಲವೆ? ಅವರು ಹೇಳುತ್ತಾರೆ ; If this state Government is capable of moblising the resources.. Yes .... ರಾಜ್ಯ ಸರ್ಕಾರ ಈ ಜಿಗಿತ ದರದ ವೇಗದಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವಂಥ ಕೆಲಸವನ್ನು ಮಾಡುವುದಾದರೆ 3000 ಏಕೆ 5000 ತನ್ನಿರಿ ನಾವು ಸ್ವಾಗತಿಸುತ್ತೇವೆ. ನನ್ನ ಅನಿಸಿಕೆ ಇದು ಸಾಧ್ಯವಾಗುವುದಿಲ್ಲವೆಂಬುದು. ಏಕೆಂದರೆ, ಯಾವುದನ್ನು ನಾವು ಕ್ರೋಢೀಕರಣ ಎಂದು ಕರೆಯುತ್ತೇವೆಯೋ, ಆ ಕೆಲಸ ನಿಮಗೆ ಮತ್ತು ನಮಗೆ ತಿಳಿದಿರುವಂತೆ ಅಷ್ಟೊಂದು ಸುಲಭವಲ್ಲ . ಸೋಪ್ ಫ್ಯಾಕ್ಟರಿಗೆ 90 ಕೋಟಿ ರೂಪಾಯಿಗಳ ನಷ್ಟ, ಕೆಎಂಎಫ್‌ಗೆ 19 ಕೋಟಿ ರೂಪಾಯಿಗಳ ನಷ್ಟ, ಉದಾಹರಣೆಗೆ ನಾನು ಹೇಳಿದೆ ಅಷ್ಟೆ. ಇದು ಸಾಧ್ಯವಿಲ್ಲವೆನ್ನುವುದಕ್ಕೆ ನಾನು ಮಾನ್ಯಮುಖ್ಯಮಂತ್ರಿಗಳ ಭಾಷಣವನ್ನು ನೆರವಿಗೆ ತೆಗೆದುಕೊಳ್ಳಬೇಕಾಗುತ್ತದೆ. ಅವರ ಭಾಷಣದಲ್ಲಿ ಸರ್ಕಾರಿ ವೆಚ್ಚದ ಮತ್ತೊಂದು ಪ್ರಮುಖ ಬಾಬು ಎಂದರೆ ಸಂಬಳದಿಂದ ಪ್ರತಿ ವರ್ಷಕ್ಕೆ ಈ ವೆಚ್ಚ ಗಣನೀಯವಾಗಿ ಏರುತ್ತಲೇ ಇದೆ. 1987-88ರಿಂದೀಚೆಗೆ ತುಟ್ಟಿಭತ್ಯ ನೀಡಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ತುಟ್ಟಿಭತ್ಯೆಯ ಸೂಚ್ಯವನ್ನು ಅನುಸರಿಸಬೇಕಾಗಿರುವುದರಿಂದಲೂ, ತುಟ್ಟಿಭತ್ಯೆ ಏರಿಕೆಯನ್ನು ಕೇಂದ್ರ ಪ್ರಕಟಿಸುವುದಕ್ಕಿಂಥ ಮೊದಲು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸದೆ ರಾಷ್ಟ್ರೀಯ ನೀತಿಯನ್ನು ರೂಪಿಸಬೇಕಾಗಿರುವುದರಿಂದ........ ಇತ್ಯಾದಿಯಾಗಿ ಹೇಳಿದ್ದಾರೆ. ಒಟ್ಟಾರೆ ಸೇವಾ ವೆಚ್ಚ ಅಥವಾ ಸಂಬಳ ಸಾರಿಗೆ ಯೋಜನೆಯನ್ನು ಹೊರತುಪಡಿಸಿದಂಥ ಖರ್ಚುಗಳಿಗೆ ನೂರಕ್ಕೆ ಶೇಕಡಾ 53ರಷ್ಟು ಖರ್ಚಾಗುತ್ತದೆಂದು ಮುಖ್ಯಮಂತ್ರಿಗಳ ಭಾಷಣದಲ್ಲಿದೆ. ನೂರು ರೂಪಾಯಿಗಳಲ್ಲಿ 53 ರೂಪಾಯಿಗಳನ್ನು ಯೋಜನೇತರ ವೆಚ್ಚಗಳಿಗಾಗಿ ನಾವು ಖರ್ಚು ಮಾಡಬೇಕಾಗುತ್ತದೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ ನಾನು ಇದು ತಪ್ಪು ಬಜೆಟು, ಈ ಆಯವ್ಯಯ ಕೆಟ್ಟದ್ದು ಎಂದು ಪ್ರಸ್ತಾವನೆಯನ್ನು ಮಾಡಲಿಲ್ಲ. ಈ ಬಜೆಟು ರಿಯಾಲಿಸ್ಟಿಕ್ ಆಗಿ ಇಲ್ಲವೆಂದು ಹೇಳಿದೆ ಅಷ್ಟೆ. I am happy you have understood. ಏಕೆ ರಿಯಾಲಿಸ್ಟಿಕ್ ಇಲ್ಲವೆಂದು ಹೇಳಿದೆ ಎಂದರೆ, ಸಂಪನ್ಮೂಲಗಳನ್ನು ಕ್ರೋಡೀಕರಿಸುವುದಕ್ಕೆ ನಮಗೆ ಇರತಕ್ಕ ಸಾಮರ್ಥ್ಯ, ತಾಕತ್ತು

ಬಹಳ ಮುಖ್ಯವಾದುದು, ನಮಗೆ ಇರತಕ್ಕ ಪರಿಸ್ಥಿತಿ ಅತ್ಯಂತ ಸೀಮಿತವಾದುದು. ಅದು ಈ ರಾಜ್ಯದ ಆಡಳಿತದಲ್ಲಿ ಕೈಯಾಡಿಸಿರುವ ಎಲ್ಲರಿಗೂ ಅನುಭವವಾಗಿದೆ. ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಂದ. ಒಂದೇ ಒಂದರಲ್ಲಿ ಒಂದು ಪೈಸೆ ಲಾಭ ಬರತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಯಾವುದೋ ಒಂದು ಆಗ್ರೋಕೊರ್ ಎನ್ನತಕ್ಕ ಸಂಸ್ಥೆಯವರು ಮಾತ್ರ 5-10 ಲಕ್ಷ ರೂಪಾಯಿಗಳನ್ನು ಆದಾಯವೆಂದು ಚೆಕ್ ರೂಪದಲ್ಲಿ ಕೊಟ್ಟಿರತಕ್ಕದನ್ನು ಪತ್ರಿಕೆಯಲ್ಲಿ ನೋಡಿದ್ದೇನೆ ಉಳಿದಿರತಕ್ಕ ಎಲ್ಲಾ ಸಾರ್ವಜನಿಕ ಉದ್ದಿಮೆಗಳು, ಅಲ್ಲಿರತಕ್ಕ ನೌಕರರುಗಳನ್ನು ಸಾಕಲು, ಅವರುಗಳ ಸಂಬಳ ಸಾರಿಗೆಯನ್ನು ಕೊಡಲು ಪ್ರತಿವರ್ಷವೂ ಸಹ ಕೋಟ್ಯಾಂತರ ರೂಪಾಯಿಗಳನ್ನು ನಷ್ಟವಾಗಿ ಅನುಭವಿಸತಕ್ಕ ಪರಿಸ್ಥಿತಿಯಲ್ಲಿ ದೆ.

ಛೇರ್ಮನ್ : ತಾವು ಉಳಿದುದನ್ನು ನಾಳೆ ದಿನ ಮುಂದುವರೆಸಬಹುದು.

<u>ಅಂಗನವಾಡಿ ಕಾರ್ಯಕರ್ತೆಯರ ಗಂಭೀರ ಪರಿಸ್ಥಿತಿಗೆ ಮಂತ್ರಿಗಳಿಂದ ಹೇಳಿಕೆ.</u>

* ಶ್ರೀ ಪಿ.ಜಿ. ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ನಾವು ಈ ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತರಿಗೆ ಇರತಕ್ಕ ತೊಂದರೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ಅವರುಗಳಲ್ಲಿ 2-3 ಸಂಘಟನೆಗಳಿದ್ದು, ಒಂದು ಸಂಘಟನೆಯವರು ಇವತ್ತು ಮೆರವಣಿಗೆಯನ್ನು ಮಾಡಿ ವಿಧಾನ ಸೌಧದ ಮುಂದೆ ಸಾರ್ವಜನಿಕ ಸಭೆಯನ್ನೂ ಕೂಡ ಮಾಡಿ ಅವರ ಸಮಸ್ಯೆಯ ಬಗ್ಗೆ ಸರ್ಕಾರದ ಮುಂದಿಟ್ಟಿದ್ದಾರೆ. ನಾನು ಸಹ ಸಮಾಜಕಲ್ಯಾಣ ಇಲಾಖೆಯ ಮಂತ್ರಿಯಾಗಿ ಕೆಲವು ದಿನ ಕೆಲಸ ಮಾಡಿದ್ದೇನೆ. ರಾಜ್ಯ ಸರ್ಕಾರದವರು ಅವರ ಎಲ್ಲಾ ಸಮಸ್ಯೆಯನ್ನು ಒಂದೇ ರಾತ್ರಿಯಲ್ಲಿ ಬಗೆಹರಿಸಲು ಸಾಧ್ಯವಿಲ್ಲ, ಅದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ, ಅದರೆ ಒಂದನ್ನು ಮಾನ್ಯ ಮಂತ್ರಿಗಳಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ ಈಗ ನಾವು ದಿನಗೂಲಿಯವರಿಗೆ, ಬೀಡಿ ಕಟ್ಟುವವರಿಗೆ 18 ರಿಂದ 22 ರೂಪಾಯಿಗಳನ್ನು ಕೊಡಲು ನಿಶ್ಚಯ ಮಾಡಿದ್ದೇವೆ. ಆದರೆ ಈ ಅಂಗನವಾಡಿಯವರಿಗೆ ಬರತಕ್ಕದ್ದು ಕೇವಲ 8 ರಿಂದ 10 ರೂಪಾಯಿಗಳು ಮಾತ್ರ. ಆಕೆ ಬೆಳಿಗೆ 7 ಗಂಟೆಗೆ ಬಂದು ಅಂಗನವಾಡಿಯನ್ನು ತೆರೆದು ಮಕ್ಕಳನ್ನು ಕರೆದುಕೊಂಡು ಬಂದು, ಅವರನ್ನು ಕ್ಲೀನ್ ಮಾಡಿ ಈ ರೀತಿ ಬೇಕಾದಷ್ಟು ಕೆಲಸ ಮಾಡಬೇಕಾಗುತ್ತದೆ, ಕೇಂದ್ರ ಸರ್ಕಾರದವರು 5-6 ತಿಂಗಳ ಹಿಂದೆ 100 ರಿಂದ 50 ರೂಪಾಯಿಯವರೆಗೆ ಜಾಸ್ತಿ ಮಾಡಿದ್ದಾರೆ. ಆದರೆ ರಾಜ್ಯ ಸರ್ಕಾರದವರು ಅದನ್ನು ಮಾಡಲಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದವರ ಜೊತೆ ಮಾತನಾಡುವುದರಿಂದ ಉಪಯೋಗವಾಗುವುದಿಲ್ಲ, ನಾವೆಲ್ಲರೂ ಸೇರಿ ಹೆಚ್ಚು ಮಾಡುವುದಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ನಮ್ಮಲ್ಲಿ ಸುಮಾರು 25-30 ಸಾವಿರ ಅಂಗನವಾಡಿ ಕಾರ್ಯಕರ್ತರು ಇದ್ದಾರೆ. ತಮಗೆ ಗೊತ್ತಿರುವ ಹಾಗೆ ಇದರಲ್ಲಿ ಎರಡು ಪ್ರಕಾರವಿದೆ. ಒಂದು ಸೆಂಟ್ರಲ್ ಸೆಕ್ಟಾರ್ ಮತ್ತೊಂದು ಸ್ಟೇಟ್ ಸೆಕ್ಟಾರ್. ಸೆಂಟ್ರಲ್ ಸೆಕ್ಟಾರ್‌ನಲ್ಲಿರುವವರಿಗೆ ಜಾಸ್ತಿಯಾಗಿದೆ, ಆದರೆ ಸ್ಟೇಟ್ ಸೆಕ್ಟಾರ್‌ನ ಅಡಿಯಲ್ಲಿ ಬರುವವರಿಗೆ ಜಾಸ್ತಿಯಾಗಿಲ್ಲ, ಕಡೆಯಪಕ್ಷ ಸ್ಟೇಟ್ ಸೆಕ್ಟಾರ್‌ನಲ್ಲಿರುವವರಿಗೆ ಸೆಂಟ್ರಲ್ ಸೆಕ್ಟಾರ್‌ನ ಆನ್‌ಪಾರ್ ಇರುವಂತೆ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ. ಇನ್ನೊಂದು ವಿಷಯವೇನೆಂದರೆ ತಾವು ಈಗ ಸೋಶಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಹುದ್ದೆಗಳಲ್ಲು ನೇಮಕಾತಿಯನ್ನು ಮಾಡಬೇಕೆಂದಿದ್ದೀರಿ, ತಮಗೆ ಗೊತ್ತಿರುವ ಹಾಗೆ ಹಿಂದುಳಿದ ವರ್ಗದವರ ಹಾಸ್ಟೆಲ್‌ಗಳಲ್ಲಿ ದಲಾಯಿತ ಇರುವುದಿಲ್ಲ, ಅಡುಗೆಯವರು ಇಲ್ಲ, ಅಲ್ಲಿ ಬಹಳ ಹೀನವಾದ ಸ್ಥಿತಿ ಇದೆ. ಆದುದರಿಂದ ತಾವು ಅಲ್ಲಿ ನೇಮಕಾತಿಯನ್ನು ಮಾಡಿಕೊಳ್ಳುವ ಸಮಯದಲ್ಲಿ ನೀವು ಏನು ವಯಸ್ಸನ್ನು, ವಿದ್ಯಾರ್ಹತೆಯನ್ನು ಗೊತ್ತು ಮಾಡುತ್ತಿರೋ ಅದು ಈ ಅಂಗನವಾಡಿಯ ಕಾರ್ಯಕರ್ತರಲ್ಲಿ ಇದ್ದರೆ ಅವರಿಗೆ ಫ್ರಿಫರೆನ್ಸ್ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

6. 00 ಪಿ. ಎಂ.